
# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಸುಲು
EDITOR : S VENKATESULU
ANANTHA JANA SAKTHI KANNADA DAILY ಕನ್ನಡ ದಿನಪತ್ರಿಕೆ
ಸಂಪುಟ : 01 ಸಂಚಿಕೆ : 61 ರಿ.ನಂ : ಕೆಎನ್ಎಎನ್ / 26 / ಎ5487 ಬಳ್ಳಾರಿ ಶುಕ್ರವಾರ ದಿನಾಂಕ : 11-09-2026 ಪುಟ : 04 ಬೆಲೆ : 2-00

## ಉಜ್ಜಯಿನಿಯಲ್ಲಿ ಪವಾಡ! ಕ್ರೇನ್‌ಗೂ ಜಗ್ಗದ ಖಡೇ ಹನುಮಾನ್



ಉಜ್ಜಯಿನಿ : ಮಧ್ಯಪ್ರದೇಶದ ಧಾರ್ಮಿಕ ನಗರಿ ಉಜ್ಜಯಿನಿಯ ಸತಿ ಗೇಟ್ ಬಳಿ ಇರುವ ಐತಿಹಾಸಿಕ 'ಖಡೇ ಹನುಮಾನ್' ದೇವಾಲಯದ ವಿಗ್ರಹವು ಇತ್ತೀಚೆಗೆ ಭಾರಿ ಸುದ್ದಿಯಲ್ಲಿದ್ದು, ಭಕ್ತರಲ್ಲಿ ತೀವ್ರ ಕುತೂಹಲ ಮತ್ತು ಆಸ್ತೆಯ ಕೇಂದ್ರವಾಗಿದೆ. ಅದಕ್ಕೆ ಕಾರಣ, ವಿಗ್ರಹವನ್ನು ರಸ್ತೆ ಅಗಲೀಕರಣಕ್ಕಾಗಿ ಸ್ಥಳಾಂತರಿಸಲು ಜಿಲ್ಲಾಡಳಿತ ನಡೆಸಿದ ಭಾರಿ ಪ್ರಯತ್ನಗಳು ಸಂಪೂರ್ಣವಾಗಿ ವಿಫಲವಾಗಿವೆ. ಹೌದು, ರಸ್ತೆ ವಿಸ್ತರಣೆ ಯೋಜನೆಯ ಭಾಗವಾಗಿ, ಸುಮಾರು 170

2ನೇ ಪುಟಕ್ಕೆ...


## ಆರ್‌ಓ ಘಟಕ ದುರಸ್ತಿಗೆ ಮನವಿ



ದಾವಣಗೆರೆ: ತಾಲ್ಲೂಕಿನ ಮಾಯಕೊಂಡ ಮತ್ತು ದೊಡ್ಡ ಮಾಗಡಿಯ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳು (ಆರ್‌ಒ) ಸ್ಥಗಿತಗೊಂಡಿದ್ದು ಜನರು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ.

ಎರಡು ಗ್ರಾಮಗಳ ಘಟಕಗಳು ಸ್ಥಗಿತಗೊಂಡು ವರ್ಷಗಳಾದರೂ ಗ್ರಾಮ ಪಂಚಾಯಿತಿ ಗಮನ ಹರಿಸಿಲ್ಲ. ಇದರಿಂದ ಶುದ್ದೀಕರಣ ಘಟಕಗಳ ಸುತ್ತ ಗಿಡಗಳು ಬೆಳೆದುಕೊಂಡಿವೆ. ಕಟ್ಟಡ ಪಾಳು ಬಿದ್ದಿರುವಂತೆ ಕಾಣುತ್ತಿದ್ದು, ಸುತ್ತ ಟ್ರ್ಯಾಕ್ಟರ್‌ಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಹರಿಸಬೇಕು

## ದಕ್ಷಿಣ ಭಾರತಕ್ಕೂ ಜಲ ಕಂಟಕ ಕೋಡಿಮಠ ಶ್ರೀಗಳ ಭವಿಷ್ಯ



ಬೆಂಗಳೂರು: ನೇಪಾಳದಲ್ಲಿ ಸಂಭವಿಸಿದ ಭೀಕರ ಹಠಾತ್ ಪ್ರವಾಹದಿಂದಾಗಿ ಸಾವಿಗೀಡಾದವರ ಸಂಖ್ಯೆ 1,377ಕ್ಕೆ ಏರಿದ್ದು, ಅಧಿಕಾರಿಗಳು ಪ್ರವಾಹ ಪೀಡಿತ ಜಿಲ್ಲೆಗಳಿಂದ ಹೆಚ್ಚಿನ ಶವಗಳನ್ನು ವಶಪಡಿಸಿಕೊಂಡಿದ್ದಾರೆ. ಆದರೆ, ಇನ್ನೂ 5,000ಕ್ಕೂ ಹೆಚ್ಚು ಮಂದಿ ಪತ್ತೆಗೆ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ.

ನೇಪಾಳದಲ್ಲಿ ನಡೆದ ಈ ಘಟನೆಯು ಎಲ್ಲರ ಮನಸ್ಸಿನಿಂದ ಮರೆಯಾಗುವ ಮುನ್ನವೇ ಇಂಥದ್ದೇ ಒಂದು ಪರಿಸ್ಥಿತಿಯ ಬಗ್ಗೆ ಕೋಡಿಮಠ ಮಹಾಸಂಸ್ಥಾನದ ಪೀಠಾಧ್ಯಕ್ಷ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

## ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ತಡವಾಗಬಾರದು: ಹೈಕೋರ್ಟ್



ಬೆಂಗಳೂರು: 'ಕಕ್ಷಿದಾರರ ಹಿತ ರಕ್ಷಣೆ-ಯೂ ಕೋರ್ಟಿನ ಹೊಣೆ' ಎಂಬ ಕಾಳಜಿ ವ್ಯಕ್ತಪಡಿಸಿರುವ ಹೈಕೋರ್ಟ್, 'ಚಿತ್ರದುಗ-ರ್ದ ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಯಾವುದೇ ಕಿರುಕುಳ ಇಲ್ಲದೆ ಸೌಹಾರ್ದತಯುತವಾಗಿ ಮತ್ತು ವಿಳಂಬಗೊಳ್ಳದೆ ಮುಗಿಯಬೇಕು. ತಾಂತ್ರಿಕ ಕಾರಣಗಳಿಂದ ಸಾಕ್ಷಿಗಳ ವಿಚಾರಣೆ ತಡವಾಗಬಾರದು' ಎಂದು

2ನೇ ಪುಟಕ್ಕೆ..

# ಬಡವರಿಗೆ 5 ಲಕ್ಷ ಸೈಟ್, ರೈತ ಚೈತನ್ಯ:

## 100 ದಿನಗಳ ಆಡಳಿತ ಪೂರೈಸಿದ ಡಿ.ಕೆ ಶಿವಕುಮಾರ್



ಬೆಂಗಳೂರು: ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 100 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ, ಸರ್ಕಾರ ಇಂದು ಹಲವು ಹೊಸ ಯೋಜನೆಗಳು ಮತ್ತು ಉಪಕ್ರಮಗಳಿಗೆ ಚಾಲನೆ ನೀಡಿತು.

ಇದರಲ್ಲಿ 'ಸೇವಾ ಒನ್' ಡಿಜಿಟಲ್ ನಾಗರಿಕ ಸೇವಾ ವೇದಿಕೆ, ಮುಖ್ಯಮಂತ್ರಿ ರೈತ ಚೈತನ್ಯ ಯೋಜನೆ, BMTC 2.0 ಮೊಬೈಲ್ ಅಪ್ಲಿಕೇಶನ್ ಹಾಗೂ 5 ಲಕ್ಷ ವಸತಿ ನಿವೇಶನಗಳನ್ನು ವಿತರಿಸುವ ಯೋಜನೆ ಸೇರಿವೆ.

ಇದರ ಜತೆಗೆ 'ಒನ್ ಕರ್ನಾಟಕ ಮೊಬಿಲಿಟಿ ಆಪ್ – KSRTC ಅವತಾರ 2.0' ನ್ನು ಸರ್ಕಾರ ಆರಂಭಿಸಿತು. ಡೀಸೆಲ್ ವಾಹನಗಳಿಗಾಗಿ ರಿಟ್ರೋಫಿಟ್ ಎಮಿಷನ್ ಕಂಟ್ರೋಲ್ ಡಿವೈಸ್ ಉಪಕ್ರಮವನ್ನು ಪರಿಚಯಿಸುವುದರ ಜೊತೆಗೆ 'ಸೈನಿಕ ಸಮ್ಮಾನ್' ಯೋಜನೆಯನ್ನೂ ಘೋಷಿಸಲಾಯಿತು.

'ಸೇವಾ ಒನ್' ನ್ನು ರಾಜ್ಯದ 'ಒನ್ ಗವರ್ನ್‌ಮೆಂಟ್, ಒನ್ ಡಿಜಿಟಲ್' ವೇದಿಕೆಯಾಗಿ ಪರಿಚಯಿಸಲಾಗಿದ್ದು, ಒಂದೇ ಡಿಜಿಟಲ್ ವೇದಿಕೆಯ ಮೂಲಕ ನಾಗರಿಕರು ಸರ್ಕಾರಿ ಸೇವೆಗಳನ್ನು ಪಡೆಯಲು ಹಾಗೂ ತಮ್ಮ ಅಗತ್ಯಗಳನ್ನು ಸರ್ಕಾರಕ್ಕೆ ತಿಳಿಸಲು ಇದು ಸಹಕಾರಿಯಾಗಲಿದೆ.

ಕೃಷಿಯನ್ನು ಹೆಚ್ಚು ಲಾಭದಾಯಕವಾಗಿಸುವ ಉದ್ದೇಶದಿಂದ 'ಮುಖ್ಯಮಂತ್ರಿ ರೈತ ಚೈತನ್ಯ' ಯೋಜನೆ ಆರಂಭಿಸಲಾಗಿದೆ. ಸೂಕ್ತ ಸಮಯದಲ್ಲಿ, ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಕೃಷಿ ಸಲಹೆಗಳನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ. ಮೊದಲ ಹಂತದಲ್ಲಿ ಮಂಡ್ಯ, ಬೆಳಗಾವಿ, ವಿಜಯಪುರ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಯೋಜನೆ ಜಾರಿಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸುವ ಉದ್ದೇಶವಿದೆ.

BMTC 2.0 ಮೊಬೈಲ್ ಅಪ್ಲಿಕೇಶನ್ ಮೂಲಕ ಪ್ರಯಾಣಿಕರು ಬಸ್‌ಗಳ ಸಂಚಾರವನ್ನು ಲೈವ್ ಆಗಿ ಟ್ರ್ಯಾಕ್ ಮಾಡಬಹುದು. ಬಸ್‌ಗಳ ಆಗಮನದ ಸಮಯ ಹಾಗೂ ಮಾರ್ಗಗಳನ್ನು

2ನೇ ಪುಟಕ್ಕೆ...

## ಸೆ.12ಕ್ಕೆ ಬ್ರಿಕ್ಸ್ ಶೃಂಗಸಭೆ:

### ಮೋದಿ–ಕ್ಸಿ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ



ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಶನಿವಾರ ಸೆಪ್ಟೆಂಬರ್ 12ರಂದು ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ದ್ವಿಪಕ್ಷೀಯ ಸಭೆ ನಡೆಸುವ ಸಾಧ್ಯತೆ ಇದೆ.

ಶನಿವಾರ ಬೆಳಗ್ಗೆ ಸುಮಾರು 11 ಗಂಟೆಗೆ ಕ್ಸಿ ಜಿನ್‌ಪಿಂಗ್ ದೆಹಲಿಗೆ ಆಗಮಿಸುವ ನಿರೀಕ್ಷೆಯಿದ್ದು, ಭಾನುವಾರ ಇದೇ ಸಮಯದ ಸುಮಾರಿಗೆ ಅವರು ಭಾರತದಿಂದ ನಿರ್ಗಮಿಸಲಿದ್ದಾರೆ. ಅವರೊಂದಿಗೆ ಹಿರಿಯ ಸರ್ಕಾರಿ ಅಧಿಕಾರಿಗಳು ಹಾಗೂ ಉದ್ಯಮ ಪ್ರತಿನಿಧಿಗಳನ್ನು ಒಳಗೊಂಡ ದೊಡ್ಡ ನಿಯೋಗ ಆಗಮಿಸಲಿದೆ.

ಶೃಂಗಸಭೆಯಲ್ಲಿ ಕ್ಸಿ ಜಿನ್‌ಪಿಂಗ್ ಭಾಗವಹಿಸುವುದನ್ನು ಚೀನಾ ವಿದೇಶಾಂಗ ಸಚಿವಾಲಯ ನಿನ್ನೆ ಅಧಿಕೃತವಾಗಿ ದೃಢಪಡಿಸಿದೆ.

2019ರಲ್ಲಿ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭಕ್ಕಿಂತ ಈ ಬಾರಿ ಅವರೊಂದಿಗೆ ಆಗಮಿಸುವ ನಿಯೋಗದ ಗಾತ್ರ ದ್ವಿಗುಣವಾಗಿದ್ದು, ಸುಮಾರು 400 ಅಧಿಕಾರಿಗಳು ಇರಲಿದ್ದಾರೆ ಎಂದು ರಾಯಿಟರ್ಸ್ ಈ ಹಿಂದೆ ವರದಿ ಮಾಡಿತ್ತು.

ಕ್ಸಿ ಜಿನ್‌ಪಿಂಗ್ ಅವರ ಭಾಗವಹಿಸುವಿಕೆಯನ್ನು ಚೀನಾ ಇನ್ನೂ ದೃಢಪಡಿಸಿಲ್ಲ. ಆದರೆ, ಚೀನಾ ವಿದೇಶಾಂಗ ಸಚಿವಾಲಯ ಈ ಹಿಂದೆ, ದೇಶವು ಬ್ರಿಕ್ಸ್ ಸಹಕಾರಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ ಮತ್ತು ಸಕ್ರಿಯವಾಗಿ ಭಾಗವಹಿಸುತ್ತದೆ ಎಂದು ಹೇಳಿದ್ದು, ಆತಿಥೇಯ ರಾಷ್ಟ್ರವಾದ ಭಾರತಕ್ಕೆ ಬೆಂಬಲ ವ್ಯಕ್ತಪಡಿಸಿತ್ತು.

2ನೇ ಪುಟಕ್ಕೆ..

## 'ದೃಢ ಕರ್ನಾಟಕ': ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ: ಸಿಎಂ ಡಿಕೆಶಿ



'ದೃಢ ಕರ್ನಾಟಕ' ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ : ಸಿಎಂ ಡಿಕೆಶಿ

ಬೆಂಗಳೂರು : ಕರ್ನಾಟಕದ ಜನರ ಸೇವೆಯ ಬದ್ಧತೆಯನ್ನು ಪುನರುಚ್ಚರಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್,, ನನ್ನ ಉಸಿರು ಇರುವವರೆಗೂ ಕರ್ನಾಟಕ ಮತ್ತು ಕನ್ನಡಿಗರ ಸೇವೆಯೇ ನನ್ನ ಸಂಕಲ್ಪವಾಗಿರುತ್ತದೆ ಎಂದು ಹೇಳಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿಯಾಗಿ ತಮ್ಮ ಮೊದಲ 100 ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ ಇಂದು ಸಾರ್ವಜನಿಕರಿಗೆ ಬರೆದ ಪತ್ರದಲ್ಲಿ ಅವರು ಈ ಮಾತುಗಳನ್ನು ಹೇಳಿದ್ದಾರೆ.

ಜನರ ಆಶೋತ್ತರಗಳಿಗೆ ಸ್ಪಂದಿಸುವುದು, ಅವರ ಧ್ವನಿಯಾಗುವುದು. ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ನಾವು ಹೆಜ್ಜೆ ಇಟ್ಟು 100 ದಿನಗಳು ಪೂರ್ಣಗೊಂಡಿವೆ. ಈ ಶತಕದ ಪಥವು ಮುಂದಿನ ದಿನಗಳಲ್ಲಿ ಸಮೃದ್ಧ, ಸ್ಥಿರ ಮತ್ತು ಅಭಿವೃದ್ಧಿ ಹೊಂದಿದ ಕರುನಾಡಿನತ್ತ ಕರೆದೊಯ್ಯಲಿದೆ. ಜನರ ನಿರೀಕ್ಷೆಗಳನ್ನು ಈಡೇರಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ನವ ಕರ್ನಾಟಕ ನಿರ್ಮಾಣದ ಪಯಣ ಮುಂದುವರಿಯಲಿದೆ ಎಂದು ಹೇಳಿದ್ದಾರೆ.

ಕಳೆದ 100 ದಿನಗಳಲ್ಲಿ ತಮ್ಮ ಸರ್ಕಾರ ಕೈಗೊಂಡ ಪ್ರಮುಖ ಕ್ರಮಗಳು ಮತ್ತು ಸಾಧನೆಗಳನ್ನು ಡಿ ಕೆ ಶಿವಕುಮಾರ್ ಪಟ್ಟಿ ಮಾಡಿದ್ದಾರೆ. ವೃತ್ತಿಪರ

2ನೇ ಪುಟಕ್ಕೆ...

## ಅಜ್ಞಾನದ ಕತ್ತಲನ್ನು ಕಳೆದು ಜ್ಞಾನದ ಬೆಳಕು ತೋರಿಸುವವನೇ ಗುರು: ಸುರೇಶ ಜತ್ತಿ



ವಿಜಯಪುರ : ಅಜ್ಞಾನದ ಕತ್ತಲನ್ನು ಕಳೆದು ಜ್ಞಾನದ ಬೆಳಕನ್ನು ತೋರಿಸುವವನೇ ನಿಜವಾದ ಗುರು. ಮಕ್ಕಳ ಮನಸ್ಸನ್ನು ಅರಿತು ತಾಯಿಯಂತೆ ಲಾಲಿಸಿ, ತಂದೆಯಂತೆ ಗದರಿಸಿ, ಶಿಕ್ಷಣದ ಜೊತೆಗೆ ಸಂಸ್ಕಾರ ಹಾಗೂ ಜೀವನ ಮೌಲ್ಯಗಳನ್ನು ಕಲಿಸುವ ಶಿಕ್ಷಕರು ಸಾಕ್ಷಾತ್ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ವರೂಪ ಎಂದು ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸೆಸ್ ಹಾಗೂ ನೀಲಾಂಬಿಕ ಪ್ರಾಥಮಿಕ ಶಾಲೆಯ ಅಧ್ಯಕ್ಷ ಸುರೇಶ ಜತ್ತಿ ಹೇಳಿದರು.

ನಗರದ ಕನಕದಾಸ ಬಡಾವಣೆಯಲ್ಲಿರುವ ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸೆಸ್ ಸಭಾಂಗಣದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ದೊಡ್ಡ ಕನಸುಗಳನ್ನು ಬಿತ್ತಿ, ಭವಿಷ್ಯದ ಯಶಸ್ವಿ ಪ್ರಜೆಗಳಾಗಿ ರೂಪಿಸುವ ಮಹತ್ತರ ಜವಾಬ್ದಾರಿ ಹೊಂದಿದ್ದಾರೆ. ತಂದೆ-ತಾಯಿಯ ಋಣವನ್ನು ಎಷ್ಟು ತೀರಿಸಿದರೂ ಸಾಲದು. ಅದೇ ರೀತಿ ಬದುಕಿಗೆ ದಾರಿ

2ನೇ ಪುಟಕ್ಕೆರ...

## ನೀವು ಯಾರ್ ಜೊತೆ ಮಾತಾಡ್ತಿದ್ದೀರಾ ಗೊತ್ತ?: ಪೊಲೀಸರಿಗೆ ಮಾಜಿ ಸಂಸದ ಪ್ರಜಲ್ವ್ ರೇವಣ್ಣ ಆವಾಜ್




ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇದ್ದ ಜೈಲಿನ ಬ್ಯಾರಕ್‌ನಲ್ಲಿ ಮೊಬೈಲ್ ಪತ್ತೆ ಸಂಬಂಧ ತನಿಖೆ ಚುರುಕುಗೊಂಡಿದೆ. ಈ ಪ್ರಕರಣ ಸಂಬಂಧ ಪೊಲೀಸರು ವಿಚಾರಣೆ ನಡೆಸಿದ್ದಾರೆ. ವಿಚಾರಣೆ ವೇಳೆ ಪರಪ್ಪನ ಅಗ್ರಹಾರ ಪೊಲೀಸರಿಗೆ ಪ್ರಜ್ವಲ್ ರೇವಣ್ಣ ಆವಾಜ್ ಹಾಕಿದ್ದಾರೆ ಎನ್ನಲಾಗಿದೆ.

ನಾನ್ ಯಾರು ಗೊತ್ತ? ನೀವು ಯಾರ ಜೊತೆಗೆ ಮಾತನಾಡ್ತಿದ್ದೀರಾ ಗೊತ್ತ? ನಾನು ಮಾಜಿ ಸಂಸದ, ಮಾಜಿ ಪ್ರಧಾನಿ ಮೊಮ್ಮಗ. ಬೇಕಂತಲೆ ನನ್ನನ್ನು ಸಿಕ್ಕಿಸಲು ಯತ್ನಿಸುತ್ತಿದ್ದೀರ, ಬೇಲ್ ಕ್ಯಾನ್ಸಲ್ ಮಾಡಲು ಸಾಕಷ್ಟು ಪ್ರಯತ್ನ ಪಡುತ್ತಿದ್ದೀರ. ನಾನು ಏನೂ ಹೇಳಲ್ಲ, ಏನೂ ಮಾತಾಡಲ್ಲ. ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಪೊಲೀಸರಿಗೇ ಪ್ರಜ್ವಲ್ ಹೇಳಿದ್ದಲ್ಲದೆ ನಾನು ಕೋರ್ಟ್‌ಗೆ ಅಪೀಲ್ ಹೋಗ್ತೀನಿ ಅಂತ ಪ್ರಜ್ವಲ್ ಹೇಳಿದ್ದಾರೆ ಎನ್ನಲಾಗಿದೆ.

## ಗಣೇಶೋತ್ಸವ ಶಾಂತಿ-ಸೌಹಾರ್ದದಿಂದ ಆಚರಿಸಿ: ಡಿಸಿ




ದಾವಣಗೆರೆ : ಗೌರಿ ಗಣೇಶ ಹಬ್ಬವನ್ನು ಶಾಂತಿಯುತ, ವಿಜೃಂಭಣೆ ಹಾಗೂ ಭಕ್ತಿ ಭಾವದಿಂದ ಆಚರಿಸಲು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ಜಿಲ್ಲಾಧಿಕಾರಿ ಜಿ. ಎಂ. ಗಂಗಾಧರ ಸ್ವಾಮಿ ಹೇಳಿದರು. ನಗರದ ಜಿಲ್ಲಾಧಿಕಾರಿ ತುಂಗಭದ್ರಾ ಸಭಾಂಗಣದಲ್ಲಿ ಗೌರಿ ಗಣೇಶ ಹಬ್ಬದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ನಾಗರಿಕ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಂಬರುವ ಗಣೇಶೋತ್ಸವ ಹಬ್ಬವನ್ನು ಶಾಂತಿಯುತ ಹಾಗೂ ಸೌಹಾರ್ದಯುತವಾಗಿ ಆಚರಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಲಿದ್ದು, ಸಾರ್ವಜನಿಕರ ಸುರಕ್ಷತೆ ಮತ್ತು ನೈರ್ಮಲ್ಯಕ್ಕೆ ಮೊದಲ ಆದ್ಯತೆ ನೀಡಲಾಗುವುದು ಹಾಗೂ ಗಣೇಶ ಮೂರ್ತಿ ಪ್ರತಿಷಾಪನೆಗೆ ಅನುಮತಿ ಪಡೆಯಲು ತಹಸೀಲ್ದಾರ್, ತಾಲೂಕು ಪಂಚಾಯಿತಿ ಇಒ, ಡಿವೈಎಸ್ಪಿ, ಬೆಸ್ಕಾಂ, ಅಗ್ನಿಶಾಮಕ ದಳ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳನ್ನೊಳಗೊಂಡ 'ಸಿಂಗಲ್ ವಿಂಡೋ' ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಅರ್ಜಿದಾರರು ತಾಲೂಕು ಕಚೇರಿಗೆ ಅಲೆಯುವ ಅಗತ್ಯವಿಲ್ಲದೆ, ಸ್ಥಳೀಯ ಪೊಲೀಸ್ ಠಾಣೆಯಲ್ಲೇ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬಹುದು ಎಂದರು. ಮೆರವಣಿಗೆ ಸಂದರ್ಭದಲ್ಲಿ ವಿದ್ಯುತ್ ತಂತಿಗಳಿಂದ

2ನೇ ಪುಟಕ್ಕೆ...

# ಎಚ್ಐವಿ ಜಾಗೃತಿ : ಬೈಕ್ ರ್‍ಯಾಲಿ




ದಾವಣಗೆರೆ : ಎಚ್ಐವಿ, ಏಡ್ಸ್ ತೀವ್ರತರಹದ ಪ್ರಚಾರ ಅಭಿಯಾನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳೊಂದಿಗೆ ಗುರುವಾರ ನಗರದ ಸಿ.ಜಿ. ಆಸ್ಪತ್ರೆಯ ಮುಂಭಾಗದಲ್ಲಿ ಆಯೋಜಿಸಲಾಗಿದ್ದ ಬೈಕ್ ರ್‍ಯಾಲಿಗೆ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ: ಮುರುಳೀಧರ್ ಇವರು ಹಸಿರು ನಿಶಾನೆ ತೋರುವುದರ ಮೂಲಕ ಚಾಲನೆ ನೀಡಿದರು.

ರ್‍ಯಾಲಿಯೂ ಸಿ.ಜಿ ಆಸ್ಪತ್ರೆಯಿಂದ ಮುಂಭಾಗದಿಂದ ಆರಂಭವಾಗಿ ಗುಂಡಿ ಸರ್ಕಲ್, ವಿದ್ಯಾನಗರ, ಹದಡಿ ರಸ್ತೆ, ವಿದ್ಯಾರ್ಥಿ ಭವನ ಸರ್ಕಲ್ ತಲುಪಿತು.

ರಕ್ತನಿಧಿ ಕೇಂದ್ರದ ಡಾ.ಮಮತ, ಆರೋಗ್ಯ ಇಲಾಖೆ ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಜಾಗೃತಿ ಸಂದೇಶ ಸಾರಿದರು.

# 'ದೃಢ ಕರ್ನಾಟಕ': ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ: ಸಿಎಂ ಡಿಕೆಶಿ

ಕೋರ್ಸ್‌ಗಳಿಗೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 7.5% ಮೀಸಲಾತಿ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಸುಮಾರು 66,000 ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿರುವ 29,679 ಕೋಟಿ ರೂ ಮೊತ್ತದ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ಹಾಗೂ 10,000 ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆ ಇವುಗಳಲ್ಲಿ ಸೇರಿವೆ. ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ ಂಐ ವಿಶ್ವವಿದ್ಯಾಲಯ ಸ್ಥಾಪನೆ, ಪ್ರೌಢಶಾಲಾ ಪೂರ್ವ ಹಂತದಿಂದಲೇ ಂಐ ಶಿಕ್ಷಣ ಪರಿಚಯಿಸುವುದು, ಮೋಡ ಬಿತ್ತನೆ ಹಾಗೂ ಉದ್ಯೋಗ ನಿಧಿ ಯೋಜನೆಯನ್ನೂ ಸರ್ಕಾರದ ಪ್ರಮುಖ ಸಾಧನೆಗಳಾಗಿ ಅವರು ಉಲ್ಲೇಖಿಸಿದ್ದಾರೆ. ರಾಜ್ಯದ ಭವಿಷ್ಯದ ತಮ್ಮ ದೃಷ್ಟಿಕೋನವನ್ನು 'ದೃಢ ಕರ್ನಾಟಕ' ಎಂದು ಬಣ್ಣಿಸಿರುವ ಡಿ ಕೆ ಶಿವಕುಮಾರ್, ಆ ಮೂಲಕ ರಾಜ್ಯವನ್ನು ಆರ್ಥಿಕವಾಗಿ ಬಲಿಷ್ಠ, ಸಾಮಾಜಿಕವಾಗಿ ಸಬಲ ಹಾಗೂ ತಂತ್ರಜ್ಞಾನದಲ್ಲಿ ಮುಂದುವರಿದ ರಾಜ್ಯವನ್ನಾಗಿ ರೂಪಿಸುವ ಉದ್ದೇಶ ಹೊಂದಿರುವುದಾಗಿ ಹೇಳಿದ್ದಾರೆ. ಮುಂದಿನ 500 ದಿನಗಳಿಗೆ ಹೆಚ್ಚಿನ ಸಂಕಲ್ಪ ಮತ್ತು ಪರಿಶ್ರಮದ ಅಗತ್ಯವಿದೆ ಎಂದು ತಿಳಿಸಿದ್ದಾರೆ.

# ಬಡವರಿಗೆ 5 ಲಕ್ಷ ಸೈಟ್, ರೈತ ಚೈತನ್ಯ:

## 100 ದಿನಗಳ ಆಡಳಿತ ಪೂರೈಸಿದ ಡಿ.ಕೆ ಶಿವಕುಮಾರ್

ಪರಿಶೀಲಿಸುವುದು, ಡಿಜಿಟಲ್ ಮೂಲಕ ಟಿಕೆಟ್ ಖರೀದಿಸುವುದು ಮತ್ತು ವ್ಯಾಲೆಟ್ ಸೌಲಭ್ಯ ಬಳಸುವುದಕ್ಕೂ ಅವಕಾಶವಿದೆ.

ಇದಲ್ಲದೆ, ವಿವಿಧ ಸಾರಿಗೆ ವ್ಯವಸ್ಥೆಗಳನ್ನು ಒಳಗೊಂಡ ಮಲ್ಟಿಮೋಡಲ್ ಜರ್ನಿ ಪ್ಲಾನರ್, ಬಿಎಂಟಿಸಿ ಮತ್ತು ನಮ್ಮ ಮೆಟ್ರೊಗೆ ಸಂಯೋಜಿತ ಟಿಕೆಟ್ ವ್ಯವಸ್ಥೆ ಹಾಗೂ ದೈನಂದಿನ, ಸಾಪ್ತಾಹಿಕ ಮತ್ತು ಮಾಸಿಕ ಪಾಸ್‌ಗಳ ಸೌಲಭ್ಯವನ್ನೂ ಆಪ್ ಒದಗಿಸಲಿದೆ. 'ಒನ್ ಕರ್ನಾಟಕ ಮೊಬಿಲಿಟಿ ಆಪ್ ಕೆಎಸ್ಆರ್‌ಟಿಸಿ ಅವತಾರ 2.0' ಮೂಲಕ ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ನಿರ್ವಹಿಸುವ ಬಸ್‌ಗಳ ಟಿಕೆಟ್‌ಗಳನ್ನು ಆಪ್ ಅಥವಾ ವಾಟ್ಸ್‌ಪ್ ಮೂಲಕ ಕಾಯ್ದಿರಿಸಲು ಸಾಧ್ಯವಾಗಲಿದೆ. ಕೆಎಸ್ ಆರ್ ಟಿಸಿ ಮತ್ತು ಕೆಎಸ್ ಟಿಡಿಸಿ ಪ್ರವಾಸ ಪ್ಯಾಕೇಜ್‌ಗಳು ಹಾಗೂ ಡಿಜಿಟಲ್ ಮಾಸಿಕ ಪಾಸ್‌ಗಳ ಸೌಲಭ್ಯವೂ ಇದರಲ್ಲಿ ಇರಲಿದೆ.

ರಾಜ್ಯಾದ್ಯಂತ ಬಡವರಿಗೆ 15 ಲಕ್ಷ ನಿವೇಶನ ಹಂಚಿಕೆ ಗುರಿ ಹೊಂದಲಾಗಿದೆ. ಪ್ರತಿ ಜಿಲ್ಲೆಯಲ್ಲಿ 50 ಸಾವಿರ ನಿವೇಶನ ಹಂಚೋದಕ್ಕೆ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ 5 ಲಕ್ಷ ಸೈಟುಗಳನ್ನು 30 ಜಿಲ್ಲೆಗೆ ಹಂಚಲಿದ್ದಾರೆ. ಎಲ್ಲಾ ಡಿಸಿಗಳಿಗೆ ಸ್ಥಳ ಗುರುತಿಸಲು ಸೂಚಿಸಲಾಗಿದೆ. ಎಸ್‌ಸಿ ಎಸ್ ಟಿ ಓಬಿಸಿ ವರ್ಗಕ್ಕೆ ಮೊದಲ ಪ್ರಾತಿನಿಧ್ಯ ನೀಡಲಾಗುತ್ತದೆ.

ಸಮಾನ ಅವಕಾಶ ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಒತ್ತು ನೀಡುವ ಸರ್ಕಾರದ ಬದ್ಧತೆಯ ಭಾಗವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿಗಳು ಘೋಷಿಸಿದರು.ಸರ್ಕಾರದ ಶಕ್ತಿಯೋಜನೆಯಲ್ಲಿ ನಿತ್ಯ ಲಕ್ಷಾಂತರ ಮಹಿಳೆಯರು ಬಸ್‌ನಲ್ಲಿ ಆಧಾರ್ ಕಾರ್ಡ್ ತೋರಿಸಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಆದರೆ ಈಗ, ಹೊಸ ಸ್ಮಾರ್ಟ್ ಕಾರ್ಡ್ ನೀಡೋದಕ್ಕೆ ಸಚಿವ ಸಂಪುಟ ಸಭೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ಆಧಾರ್ ಕಾರ್ಡ್ ಬದಲಿಗೆ ಸ್ಮಾರ್ಟ್‌ಕಾರ್ಡ್ ತೋರಿಸಿ ಮಹಿಳೆಯರು ಪ್ರಯಾಣಿಸಬಹುದಾಗಿದೆ.

ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸಲು ಸರ್ಕಾರ ಮುಂದಾಗಿದೆ. ಹೀಗಾಗಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಮತ್ತೆ ವಿದ್ಯಾರ್ಥಿ ಸಂಘಗಳಚುನಾವಣೆ ನಡೆಸಲು ಸಚಿವ ಸಂಪುಟ ಅಸ್ತು ಎಂದಿದೆ.

# ಉಜ್ಜಯಿನಿಯಲ್ಲಿ ಪವಾಡ!

## ಕ್ರೇನ್‌ಗೂ ಜಗ್ಗದ ಖಡೇ ಹನುಮಾನ್

ವರ್ಷಗಳಷ್ಟು ಹಳೆಯದಾದ ಈ ದೇವಸ್ಥಾನದ ಮೇಲ್ಛಾವಣಿ ಹಾಗೂ ಗೋಡೆಗಳನ್ನು ಜೆಸಿಬಿ ಮತ್ತು ಬುಲ್ಡೋಜರ್‌ಗಳ ಮೂಲಕ ಕೆಡವಲಾಗಿದೆ. ಆದರೆ, ದೇವಸ್ಥಾನದ ಮಧ್ಯದಲ್ಲಿದ್ದ ಸುಮಾರು 8 ಅಡಿ ಎತ್ತರದ ಹನುಮಂತನ ವಿಗ್ರಹ ಮಾತ್ರ ಒಂದಿಂಚೂ ಅಲುಗಾಡದೆ ಅಚಲವಾಗಿ ನಿಂತಿದೆ. ಆ ಕುರಿತ ವರದಿ ಇಲ್ಲಿದೆ:

ಉಜ್ಜಯಿನಿಯಲ್ಲಿ 2028ರ ಏಪ್ರಿಲ್ 9 ರಿಂದ ಮೇ 8 ರವರೆಗೆ (ಒಂದು ತಿಂಗಳ ಕಾಲ) ನಡೆಯಲಿರುವ ಸಿಂಹಸ್ಥ ಮಹಾಕುಂಭ ಮೇಳದ ಸಿದ್ಧತೆಗಾಗಿ ನಗರದ ರಸ್ತೆಗಳನ್ನು ವಿಸ್ತರಿಸಲಾಗುತ್ತಿದ್ದು, ಈ ಯೋಜನೆಯ ಭಾಗವಾಗಿ ಸುಮಾರು 170 ವರ್ಷಗಳಷ್ಟು ಹಳೆಯದಾದ ಈ ದೇವಸ್ಥಾನದ ಮೇಲ್ಛಾವಣಿ ಹಾಗೂ ಗೋಡೆಗಳನ್ನು ಜೆಸಿಬಿ ಮತ್ತು ಬುಲ್ಡೋಜರ್‌ಗಳ ಮೂಲಕ ಕೆಡವಲಾಗಿದೆ. ಆದರೆ, ದೇವಸ್ಥಾನದ ಮಧ್ಯದಲ್ಲಿದ್ದ ಸುಮಾರು 8 ಅಡಿ ಎತ್ತರದ ಹನುಮಂತನ ವಿಗ್ರಹ ಮಾತ್ರ ಒಂದಿಂಚೂ ಅಲುಗಾಡದೆ ಅಚಲವಾಗಿ ನಿಂತಿದೆ. ವರದಿಗಳ ಪ್ರಕಾರ, ಕಳೆದ ಕೆಲವು ದಿನಗಳಲ್ಲಿ ಜಿಲ್ಲಾಡಳಿತ ಮತ್ತು ನಗರಸಭೆ ಇಂಜಿನಿಯರ್‌ಗಳ ತಂಡ ಅತ್ಯಾಧುನಿಕ ಭಾರಿ ಹೈಡ್ರಾಲಿಕ್ ಕ್ರೇನ್‌ಗಳು ಮತ್ತು ಜೆಸಿಬಿ ಯಂತ್ರಗಳನ್ನು ಬಳಸಿ ವಿಗ್ರಹವನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು7ಕ್ಕೂ ಹೆಚ್ಚು ಬಾರಿ ಪ್ರಯತ್ನ ನಡೆಸಿತು. ಆದರೆ ಭಾರಿ ಯಂತ್ರಗಳ ಶಕ್ತಿಗೂ ಈ ವಿಗ್ರಹ ಜಗ್ಗಲಿಲ್ಲ ಎನ್ನಲಾಗಿದೆ.

ಇನ್ನು, ಈ ದೃಶ್ಯಗಳನ್ನು ಕಂಡು ಬೆರಗಾದ ಸ್ಥಳೀಯರು ಮತ್ತು ಭಕ್ತರು ಇದನ್ನು ಭಗವಂತನ ಸಾಕ್ಷಾತ್ ಪವಾಡ ಹಾಗೂ ದೈವಿಕ ಸಂಕೇತ ಎಂದು ಕರೆಯುತ್ತಿದ್ದಾರೆ. "ಹನುಮಂತನಿಗೆ ತನ್ನ ಮೂಲ ಸ್ಥಾನವನ್ನು ಬಿಟ್ಟು ಕದಲಲು ಇಷ್ಟವಿಲ್ಲ" ಎಂದು ಹೇಳುತ್ತಾ ಸಾವಿರಾರೂ ಭಕ್ತರು ವಿಗ್ರಹದ ಸುತ್ತಲೂ ಜಮಾಯಿಸಿ ಭಜನೆ ಹಾಗೂ ಹನುಮಾನ್ ಚಾಲೀಸಾ ಪಠಣ ಆರಂಭಿಸಿದ್ದಾರೆ.

ಮುಂದುವರೆದು, ಬಲವಂತವಾಗಿ ಯಂತ್ರಗಳನ್ನು ಬಳಸಿದರೆ ವಿಗ್ರಹಕ್ಕೆ ಹಾನಿಯಾಗಬಹುದು ಎಂಬ ಕಾರಣಕ್ಕೆ ಸದ್ಯಕ್ಕೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಅದರಲ್ಲೂ, ಈ ವಿಗ್ರಹವು ಸುಮಾರು 1000 ವರ್ಷಗಳಷ್ಟು ಹಳೆಯ ಇತಿಹಾಸ ಹೊಂದಿರಬಹುದು ಎಂದು ಅಂದಾಜಿಸಿರುವ ತಜ್ಞರು, ವಿಗ್ರಹದ ತಳಭಾಗದ ಆಳ ಎಷ್ಟು ವಿಸ್ತಾರವಾಗಿದೆ ಮತ್ತು ಅದು ಭೂಮಿಯ ಒಳಗೆ ಹೇಗೆ ಸ್ಥಾಪಿತವಾಗಿದೆ ಎಂಬುದನ್ನು ತಿಳಿಯಲು ಈಗ ಹೈಟೆಕ್ ವೈಜ್ಞಾನಿಕ ಸ್ಕ್ಯಾನಿಂಗ್ ಮೊರೆ ಹೋಗಿದ್ದಾರೆ.

# ಸಂಸ್ಕರಿಸಿ ಶುದ್ಧೀಕರಿಸಿದ ನೀರನ್ನು ಗಿಡ, ಮರಗಳಿಗೆ ಮರುಬಳಕೆ ಮಾಡಿ

ದಾವಣಗೆರೆ : ಮೇವಿನ ಅಭಾವವಿದ್ದಲ್ಲಿ ನೆರೆ ಜಿಲ್ಲೆಗಳಿಗೆ ಮೇವು ಪೂರೈಸಲು ಜಿಲ್ಲಾಡಳಿತ ಸಿದ್ಧವಾಗಿದೆ ಎಂದರು.

ಶುದ್ಧೀಕರಿಸಿದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ದನಕರುಗಳು ಹಾಗೂ ಜಾನುವಾರುಗಳಿಗೆ ಕುಡಿಯಲು ನೀಡುತ್ತಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಲಾಗಿದೆ. ಇಂತಹ ನೀರಿನಲ್ಲಿ ಪೊರೈಡ್ ಹಾಗೂ ಅಪಾಯಕಾರಿ ಲೋಹಗಳು ಇರುವುದರಿಂದ, ಇವುಗಳನ್ನು ಕುಡಿದ ಜಾನುವಾರುಗಳ ಹಾಲನ್ನು ಸೇವಿಸುವುದರಿಂದ ಸಾರ್ವಜನಿಕರಿಗೆ ಕ್ಯಾನ್ಸರ್ ನಂತಹ ಮಾರಕ ರೋಗಗಳು ಬರುವ ಅಪಾಯವಿದೆ. ಆದ್ದ-ರಿಂದ ಜಾನುವಾರುಗಳಿಗೆ ಸಂಸ್ಕರಿಸಿದ ನೀರು ನೀಡುವುದನ್ನು ತಕ್ಷಣವೇ ನಿಲ್ಲಿಸಬೇಕು. ಯಾವುದೇ ಕಾರಣಕ್ಕೂ ಈ ನೀರನ್ನು ಬೋರ್‌ವೆಲ್‌ಗಳಿಗೆ ಮರುಪೂರಣ ಮಾಡಬಾರದು. ಅಗತ್ಯವಿದ್ದರೆ ಬೋರ್‌ವೆಲ್‌ಗಳಿಂದ ಕನಿಷ್ಠ 200 ಮೀಟ-ರ್ ದೂರದಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿ ಅಂತರ್ಜಲ ಹೆಚ್ಚಿಸಬಹುದು.

ಕೆರೆಗಳ ನಿರ್ಮಾಣ ಹಾಗೂ ಭೂಸ್ವಾಧೀನ ಪ್ರಕ್ರಿಯೆ: ಮುದ್ದಯ್ಯನ ಕೆರೆಯನ್ನು ಅಭಿವೃದ್ಧಿ ಗೊಳಿಸಬೇಕು. ಹೊಸ ಕೆರೆಗಳ ನಿರ್ಮಾಣಕ್ಕೆ ತಾಲೂಕುವಾರು ಜಾಗ ಗುರುತಿಸುವ ಕೆಲಸ ವೇಗವಾಗಿ ನಡೆಯುತ್ತಿದೆ. ಚನ್ನಗಿರಿಯಲ್ಲಿ ಸುಮಾರು 40 ಎಕರೆ ಪ್ರದೇಶದಲ್ಲಿ ಬೃಹತ್ ಕೆರೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಜಗಳೂರು, ಹರಿಹರ ಹಾಗೂ ಹೊನ್ನಾಳಿ ಭಾಗಗಳಲ್ಲಿ ಕೆರೆ ನಿರ್ಮಾಣ ಮತ್ತು ಭೂಸ್ವಾಧೀನದ ಕುರಿತು ತಹಸೀಲ್ದಾರ್ ಹಾಗೂ ಜಿಲ್ಲಾಡಳಿತದ ಹಂತದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಶಾಲಾ ಕೊಠಡಿಗಳು ಹಾಗೂ ಶೌಚಾಲಯಗಳ ನಿರ್ಮಾಣ ವಿಬಿಜಿ ರಾಮ್ ಜಿ ಹಾಗೂ ಅಜ್ಜಿಹಳ್ಳಿ ಗ್ರಾಮಗಳಲ್ಲಿನ ಶಾಲೆಗಳಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದ್ದು ಈ ಶಾಲೆಗಳಿಗೆ ಅತ್ಯಾಧುನಿಕ ಕಟ್ಟಡ ಹಾಗೂ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು.

ರಸ್ತೆ ಕಾಮಗಾರಿ: ಪಿಡಬ್ಲ್ಯೂಡಿ ಹಾಗೂ ನಗರಾಡಳಿತ ವತಿಯಿಂದ ಚರಂಡಿ ಹಾಗೂ ಕಾಲುವೆಗಳ ಹೂಳೆತ್ತುವ ಕಾಮಗಾರಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕು. ಕುಂಬಳೂರು ಮಲೇಬೆನ್ನೂರು ಹಾಗೂ ಕೋಮಾರನಹಳ್ಳಿ ದೇವಸ್ಥಾನದವರೆಗಿನ ರಸ್ತೆಗಳಲ್ಲಿ ನೀರಿನ ಸೋರಿಕೆ ಸಮಸ್ಯೆ ಹೆಚ್ಚಾಗಿರುವುದರಿಂದ, ಕೇವಲ ಟಾರ್ ರಸ್ತೆ ಮಾಡುವುದರಿಂದ ಶಾಶ್ವತ ಪರಿಹಾರ ಸಿಗುವುದಿಲ್ಲ. ಈ ಭಾಗಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಸೂಕ್ತ ಚರಂಡಿ ವ್ಯವಸ್ಥೆಯನ್ನು ಕಡ್ಡಾಯವಾಗಿ ನಿರ್ಮಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ನೀರು ಪೋಲು ತಡೆ ಹಾಗೂ ಜಾಗೃತಿ ಅಭಿಯಾನ: ಬೆಳಗಿನ ಸಮಯದಲ್ಲಿ ಪೈಪ್‌ಗಳ ಮೂಲಕ ನೀರು ಪೋಲು ಮಾಡುವುದನ್ನು ತಡೆಯಲು ಬೆಳಗಿನ ಜಾವ 5 ರಿಂದ 10 ಗಂಟೆಯವರೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಟ್ಟುನಿಟ್ಟಿನ ಗಸ್ತು ನಡೆಸಬೇಕು. ಸಾರ್ವಜನಿಕರಲ್ಲಿ ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಅರಿವು ಕಾರ್ಯಕ್ರಮ ಹಾಗೂ ಮಾಧ್ಯಮಗಳ ಮೂಲಕ ಮಾಹಿತಿ ತಲುಪಿಸುವ ಕೆಲಸವಾಗಬೇಕು. ವಾಹನಗಳನ್ನು ತೊಳೆಯಲು ಪೈಪ್ ಬದಲು ಬಕೆಟ್‌ಗಳನ್ನು ಬಳಸುವಂತೆ ಸಾರ್ವಜನಿಕರ ಮನಪರಿವರ್ತನೆ ಮಾಡಬೇಕು. ಕೊಳವೆಬಾವಿ ಮರುಪೂರಣ ಮತ್ತು ಮಳೆನೀರು ಕೊಯ್ಲು ಬೊರ್‌ವೆಲ್‌ಗಳನ್ನು ಬರೀ ಕೊರೆಯುವುದಕ್ಕೆ ಆದ್ಯತೆ ನೀಡದೆ, ಅಸ್ತಿತ್ವದಲ್ಲಿರುವ ಬೋರ್‌ವೆಲ್ ಪುನರ್ ನಿರ್ಮಾಣ ಮಾಡಲು ಮತ್ತು ಮಳೆನೀರು ಕೊಯ್ಲು ಒತ್ತು ನೀಡಬೇಕು. ಹೊಸ ಬಡಾವಣೆಗಳನ್ನು ನಿರ್ಮಿಸುವಾಗ ಬಡಾವಣೆಯ ಡೆವಲಪ್‌ರ್‌ಗಳೊಂದಿಗೆ ಕಡ್ಡಾಯವಾಗಿ ಸಭೆ ನಡೆಸಿ, ಸೋಲಾರ್ ಹಾಗೂ ಮಳೆನೀರು ಕೊಯ್ಲು ಅಳವಡಿಕೆಯನ್ನು ಕಡ್ಡಾಯಗೊಳಿಸಬೇಕು.

ಕೆರೆ ಅಭಿವೃದ್ಧಿ ಪ್ರಸ್ತಾವನೆ: ಅರಣ್ಯ ಹಾಗೂ ಕಂದಾಯ ಇಲಾಖೆಗೆ ಒಳಪಡುವ ವಿವಿಧ ಸರ್ವೆ ಸಂಖ್ಯೆಗಳಲ್ಲಿನ ಕೆರೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಈಗಾಗಲೇ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಶೀಘ್ರದಲ್ಲೇ ಅಂತಿಮ ಅನುಮತಿಗೆ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣೆ: ಅರಣ್ಯ ವ್ಯಾಪ್ತಿಯಲ್ಲಿ ಕೆರೆ ಕಾಮಗಾರಿಗಳನ್ನು ಕೈಗೊಳ್ಳುವಾಗ ವನ್ಯಜೀವಿಗಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಬೇಕು. ವನ್ಯಜೀವಿಗಳ ಚಲನವಲನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಹಾಗೂ ರಕ್ಷಣಾ ಉಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು. ಕೆರೆಗಳ ಹೂಳೆತ್ತುವ ಕಾಮಗಾರಿ: ಸಣ್ಣ ನೀರಾವರಿ ಹಾಗೂ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ರೈತರಿಗೆ ಅನುಕೂಲವಾಗುವಂತೆ ಹೂಳೆತ್ತಲು ನಿಯಮಾನುಸಾರ ಅನುಮತಿ ನೀಡಲಾಗುವುದು. ಹೂಳೆತ್ತುವ ನೆಪದಲ್ಲಿ ಇಟ್ಟಿಗೆ ಭಟ್ಟಿಗಳಿಗೆ ಅಕ್ರಮವಾಗಿ ಮಣ್ಣು ಸಾಗಿಸುವುದು ಅಥವಾ ಲಾರಿಗಳ ಮೂಲಕ ವೈಜ್ಞಾನಿಕವಲ್ಲದ ರೀತಿಯಲ್ಲಿ ಮಣ್ಣು ಎತ್ತುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕೇವಲ ಟ್ರ್ಯಾಕ್ಟರ್‌ಗಳ ಮೂಲಕ ರೈತರು ತಮ್ಮ ಜಮೀನುಗಳಿಗೆ ಮಣ್ಣು ಒಯ್ಯಲು ಮಾತ್ರ ಅವಕಾಶ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಲಾಯಿತು.

ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್, ಅರಣ್ಯ ಅಧಿಕಾರಿ ಅನುಪಮಾ.ಹೆಚ್, ರಾಜ್ಯ ರೈತರ ಸಂಘದ ಮುಖಂಡರಾದ ರವಿಕುಮಾರ್ ಬಲ್ಲೂರು, ಹಾಗೂ ಬಸವನಗೌಡ, ಪ್ರತಾಪ್,ಭಾಗವಹಿಸಿದ್ದರು.

# ಸೆ.12ಕ್ಕೆ ಬ್ರಿಕ್ಸ್ ಶೃಂಗಸಭೆ:

## ಮೋದಿ-ಕ್ಸಿ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ

2020ರಲ್ಲಿ ಚೀನಾ ನಡೆಸಿದ ಗಡಿ ಅತಿಕ್ರಮಣಗಳು, ಭಾರತದ ಭೂಪ್ರದೇಶದ ಹೊಸ ಪ್ರದೇಶಗಳ ಆಕ್ರಮಣ ಹಾಗೂ ಭಾರತೀಯ ಸೈನಿಕರ ಮೇಲಿನ ದಾಳಿಗಳು ಉಭಯ ದೇಶಗಳ ಸಂಬಂಧವನ್ನು ತೀವ್ರವಾಗಿ ಹದಗೆಡಿಸಿದ್ದವು. 1962ರ ಯುದ್ಧದ ಬಳಿಕದ ಅತ್ಯಂತ ಕೆಳಮಟ್ಟಕ್ಕೆ ಸಂಬಂಧಗಳು ಕುಸಿದಿದ್ದವು. ಲಡಾಖ್‌ನ ಗಲ್ವಾನ್ ಕಣಿವೆಯಲ್ಲಿ ನಡೆದ ದಾಳಿಯಲ್ಲಿ 20 ಭಾರತೀಯ ಸೈನಿಕರು ಹುತಾತ್ಮರಾಗಿದ್ದರು.

ಲಡಾಖ್‌ನಲ್ಲಿ ಸೇನಾ ಸಂಘರ್ಷದ ಜತೆಗೆ, ಭಾರತವು ಚೀನಾದ ಹೂಡಿಕೆಗಳ ಮೇಲೆ ನಿರ್ಬಂಧಗಳನ್ನು ವಿಧಿಸಿತು. ಅಲ್ಲದೆ, ಪೂ-ರೈಕೆ ಸರಪಳಿಗಳನ್ನು ವೈವಿಧ್ಯಗೊಳಿಸುವ ಪ್ರಕ್ರಿಯೆಯನ್ನೂ ಆರಂಭಿಸಿತು.

ಆದರೆ, ಕಳೆದ ಎರಡು ವರ್ಷಗಳಲ್ಲಿ ಭಾರತ ಮತ್ತು ಚೀನಾ ನಡುವಿನ ಹಲವು ಭಿನ್ನಾಭಿಪ್ರಾಯಗಳು ಹಂತಹಂತವಾಗಿ ಕಡಿಮೆಯಾಗಿವೆ. ಲಡಾಖ್‌ನಲ್ಲಿ ಹಿಂದಿನ ಸ್ಥಿತಿಗತಿ ಇನ್ನೂ ಸಂಪೂರ್ಣವಾಗಿ ಪುನಃಸ್ಥಾಪನೆಯಾಗಿಲ್ಲ. ಅಲ್ಲದೆ, ಅರುಣಾಚಲ ಪ್ರದೇಶದ ಮೇಲಿನ ಹಕ್ಕು ಪ್ರತಿಪಾದನೆಯನ್ನು ಚೀನಾ ಮುಂದುವರಿಸಿದ್ದು, ಗಡಿ ಪ್ರದೇಶಗಳಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸುತ್ತಿದೆ.

2024ರ ಅಕ್ಟೋಬರ್‌ನಲ್ಲಿ ಹಲವು ಸುತ್ತಿನ ಮಾತುಕತೆಗಳ ಬಳಿಕ, ಲಡಾಖ್‌ನಲ್ಲಿನ ಸೇನಾ ಸಂಘರ್ಷವನ್ನು ಭಾಗಶಃ ಪರಿಹರಿಸುವ ಕುರಿತು ಭಾರತ ಮತ್ತು ಚೀನಾ ಒಮ್ಮತಕ್ಕೆ ಬಂದಿದ್ದವು. ಈ ಒಪ್ಪಂದವು ಅದೇ ವರ್ಷ ರಷ್ಯಾದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಮೋದಿ ಮತ್ತು ಕ್ಸಿ ಜಿನ್‌ಪಿಂಗ್ ಭೇಟಿಗೆ ಮಾರ್ಗವನ್ನು ಸುಗಮಗೊಳಿಸಿತ್ತು. ಅಂದಿನಿಂದ ಉಭಯ ದೇಶಗಳು ಉನ್ನತ ಮಟ್ಟದ ನಿಯಮಿತ ಸಂಪರ್ಕವನ್ನು ಮುಂದುವರಿಸಿವೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಎದುರಾಗುತ್ತಿರುವ ಸಾಮಾನ್ಯ ಸವಾಲುಗಳ ಹಿನ್ನೆಲೆಯಲ್ಲಿ ಭಾರತ ಮತ್ತು ಚೀನಾ ಎಚ್ಚರಿಕೆಯಿಂದ ಪರಸ್ಪರ ತೊಡಗಿಸಿಕೊಂಡು, ಕಾರ್ಯನಿರ್ವಹಣಾ ಸಂಬಂಧವನ್ನು ರೂಪಿಸಿಕೊಳ್ಳುತ್ತಿವೆ.

ಆದಾಗ್ಯೂ, ಉಭಯ ದೇಶಗಳ ನಡುವಿನ ಸಂಬಂಧಗಳಲ್ಲಿ ಸಂಪೂರ್ಣ ಸುಧಾರಣೆ ಇನ್ನೂ ದೂರದಲ್ಲಿದೆ. ಹಲವು ಮೂಲಭೂತ ಸಮಸ್ಯೆಗಳು ಮುಂದುವರಿದಿವೆ. ಭಾರತದ ಪ್ರಾದೇಶಿಕ ಸಾರ್ವಭೌಮತ್ವವನ್ನು ಚೀನಾ ನಿರಂತರವಾಗಿ ತಿರಸ್ಕರಿಸುತ್ತಿದೆ. ಅಲ್ಲದೆ, ಪಾಕಿಸ್ತಾನ ಮತ್ತು ಭಾರತದ ವಿರುದ್ಧದ ಅದರ ಭಯೋತ್ಪಾದಕ ಚಟುವಟಿಕೆಗಳಿಗೆ ಚೀನಾ ಬಲವಾದ ಬೆಂಬಲ ನೀಡುತ್ತಿದೆ.

ಅಪರೂಪದ ಭೂಮಿಯ ಲೋಹಗಳು (ಖಚಿಡಿಜ ಇಚಿಡಿಣಥ) ಮತ್ತು ಪ್ರಮುಖ ಖನಿಜಗಳ ಸುಗಮ ಲಭ್ಯತೆಯನ್ನು ಚೀನಾ ನಿರಾಕರಿಸುತ್ತಿದೆ. ಗಡಿ ವಿಚಾರದಲ್ಲಿ ಗಂಭೀರ ಮಾತುಕತೆ ನಡೆಸುವುದನ್ನೂ ಚೀನಾ ತಪ್ಪಿಸುತ್ತಿದ್ದು, ಬದಲಾಗಿ ಹಂತ ಹಂತವಾಗಿ ಪ್ರತ್ಯೇಕ ವ್ಯವಸ್ಥೆಗಳನ್ನು ಮಾಡಿಕೊಳ್ಳುವ ನಿಲುವನ್ನು ಪ್ರತಿಪಾದಿಸುತ್ತಿದೆ.

ಕಳೆದ ವರ್ಷ ಆಪರೇಷನ್ ಸಿಂದೂರ್ ಸಂದರ್ಭದಲ್ಲಿ ಚೀನಾ ಪಾಕಿಸ್ತಾನಕ್ಕೆ ನೈಜ-ಸಮಯದ ಗುಪ್ತಚರ ಮಾಹಿತಿ ಒದಗಿಸಿತ್ತು. ಚೀನಾದ ಬೆಂಬಲದ ಪ್ರಮಾಣ ಎಷ್ಟಿತ್ತೆಂದರೆ, ಸಂಘರ್ಷ ಒಂದು ಗಡಿಯಲ್ಲೇ ನಡೆದಿದ್ದರೂ ಭಾರತವು ಪಾಕಿಸ್ತಾನ, ಚೀನಾ ಮತ್ತು ಟರ್ಕಿಮೂರು ಪ್ರತಿಸ್ಪರ್ಧಿಗಳ ವಿರುದ್ಧ ಹೋರಾಡಿತು ಎಂದು ಭಾರತೀಯ ಸೇನೆಯ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್ ಹೇಳಿದ್ದರು.

ಎರಡೂ ದೇಶಗಳ ಕಡೆಯಿಂದ ಸಂಬಂಧ ಸುಧಾರಿಸುವ ಭರವಸೆಯ ಮಾತುಗಳು ಕೇಳಿಬರುತ್ತಿದ್ದರೂ, ವ್ಯವಹಾರಿಕ ಸಂಬಂಧಗಳು ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ರಾಷ್ಟ್ರೀಯ ಭದ್ರತಾ ಕಳವಳಗಳ ಹಿನ್ನೆಲೆಯಲ್ಲಿ ಭಾರತದ ತ್ವರಿತ ಪಾವತಿ ವ್ಯವಸ್ಥೆಗೆ ಚೀನಾದ ಅಲಿಪೇ ಅನ್ನು ಸಂಪರ್ಕಿಸುವ ಪ್ರಸ್ತಾವನೆಯನ್ನು ಭಾರತ ತಿರಸ್ಕರಿಸಿದೆ ಎಂದು ರಾಯಿಟರ್ಸ್ ಕಳೆದ ವಾರ ವರದಿ ಮಾಡಿತ್ತು.

ಭಾರತದಲ್ಲಿ ವ್ಯವಹಾರ ನಡೆಸುವಾಗ ಅಕ್ರಮಗಳೆಸಗಿದ ಹಾಗೂ ವಿದೇಶಿ ಹೂಡಿಕೆ ಕಾನೂನುಗಳನ್ನು ಉಲ್ಲಂಘಿಸಿದ ಆರೋಪಗಳ ಹಿನ್ನೆಲೆಯಲ್ಲಿ ಚೀನಾದ ಮೊಬೈಲ್ ತಯಾರಕ ಕಂಪನಿ ಶಿಯೋಮಿ ವಿರುದ್ಧ ತನಿಖೆ ನಡೆಸುವಂತೆ ಗಂಭೀರ ವಂಚನೆ ತನಿಖಾ ಕಚೇರಿ ಮಾಡಿರುವ ಶಿಫಾರಸನ್ನೂ ಭಾರತ ಪರಿಶೀಲಿಸುತ್ತಿದೆ.

ಭಾರತದ ಮತ್ತೊಂದು ಕಳವಳವೆಂದರೆ, ಚೀನಾ ತನ್ನ ಕಂಪನಿಗಳಿಗೆ ಭಾರತಕ್ಕೆ ಬಂದರು ಉಪಕರಣಗಳು, ಸೌರ ಫಲಕಗಳು ಮತ್ತು ಮೊಬೈಲ್ ತಯಾರಿಕಾ ಉಪಕರಣಗಳು ಸೇರಿದಂತೆ ಪ್ರಮುಖ ತಂತ್ರಜ್ಞಾನ ಹಾಗೂ ಮೂಲಸೌಕರ್ಯಗಳನ್ನು ಮಾರಾಟ ಮಾಡದಂತೆ ಸೂಚಿಸಿದೆ ಎಂಬುದು.

ಅಪರೂಪದ ಭೂಮಿಯ ಲೋಹಗಳು ಮತ್ತು ಪ್ರಮುಖ ಖನಿಜಗಳನ್ನು ಅಸ್ತ್ರವಾಗಿ ಬಳಸುತ್ತಿರುವ ಕ್ರಮಗಳ ಬೆನ್ನಲ್ಲೇ ಈ ಚೀನಾದ ನಿರ್ದೇಶನಗಳು ಬಂದಿವೆ.

# ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ತಡವಾಗಬಾರದು: ಹೈಕೋರ್ಟ್

ಮೌಖಿಕವಾಗಿ ಅಭಿಪ್ರಾಯಪಟ್ಟಿದೆ.

ಸಾಕ್ಷಿಗಳ ವಿಚಾರಣೆ ವೇಳೆ ಖುದ್ದು ಹಾಜರಾಗಲು ಪ್ರಕರಣದ ಆರೋಪಿ ದರ್ಶನ್‌ಗೆ ಅನುಮತಿ ನೀಡಲು ನಿರಾಕರಿಸಿದ್ದ ಸೆಷನ್ಸ್ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ದರ್ಶನ್ ಪರ ಅವರ ಪತ್ನಿ ವಿಜಯಲಕ್ಷ್ಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ವಿಜಯಲಕ್ಷ್ಮಿ ಪರ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಮತ್ತು ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರ ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸಾಕ್ಷಿ ವಿಚಾರಣೆ ವಿಳಂಬವಾದಷ್ಟೂ ಪ್ರಾಸಿಕ್ಯೂಷನ್‌ಗೆ ಅಪಾಯ' ಎಂದು ಎಚ್ಚರಿಸಿತು.

'ಪ್ರಕರಣದಲ್ಲಿ ನಾಲ್ಕೈದು ಮುಖ್ಯ ಸಾಕ್ಷಿಗಳು ಮಾತ್ರವೇ ಇದ್ದಾರೆ. ಅವರ ಪಾಟಿ ಸವಾಲಿಗೆ ಮೂರು ದಿನ ಸಾಕಾಗುತ್ತದೆ. ನಿಮಗೆ ಯಾವ ದಿನ ಬೇಕು ಎಂದು ಅರ್ಜಿದಾರರು ಹಾಗೂ ತನಿಖಾಧಿಕಾರಿ ವಿಚಾರಣಾ ಕೋರ್ಟ್ ಗಮನಕ್ಕೆ ತಂದು ತೀರ್ಮಾನಿಸಿಕೊಳ್ಳಬಹುದು. ಪ್ರಮುಖ ಸಾಕ್ಷಿಗಳ ವಿಚಾರಣೆಯನ್ನು ಬೇಕಾದರೆ ಪರಪ್ಪನ ಅಗ್ರಹಾರ ಜೈಲಿನಲ್ಲಿಯೇ ನಡೆಸಲು ಸೂಚನೆ ನೀಡುತ್ತೇನೆ' ಎಂದು ತಿಳಿಸಿದ ನ್ಯಾಯಮೂರ್ತಿಗಳು ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿದರು.

# ಅಜ್ಞಾನದ ಕತ್ತಲನ್ನು ಕಳೆದು ಜ್ಞಾನದ ಬೆಳಕು ತೋರಿಸುವವನೇ ಗುರು: ಸುರೇಶ ಜತ್ತಿ

ತೋರಿಸುವ ಶಿಕ್ಷಕರನ್ನೂ ಸದಾ ಗೌರವದಿಂದ ಸ್ಮರಿಸಬೇಕು ಎಂದರು.

ಶಿಕ್ಷಕ ವೃತ್ತಿ ಪವಿತ್ರವಾದದ್ದು :

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಶಿಕ್ಷಣ ತಜ್ಞ ಧರು ಖಿಲಾರಿ ಮಾತನಾಡಿ, ಸಾಮಾನ್ಯ ಕುಟುಂಬದಲ್ಲಿ ಜನಿಸಿ ಶಿಕ್ಷಣ ತಜ್ಞರಾಗಿ, ಭಾರತದ ಎರಡನೇ ರಾಷ್ಟ್ರಪತಿಯಾಗಿ ದೇಶ ಸೇವೆ ಸಲ್ಲಿಸಿದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಶಿಕ್ಷಕರ ಸಾಮರ್ಥ್ಯಕ್ಕೆ ಅತ್ಯುತ್ತಮ ಉದಾಹರಣೆ ಎಂದರು.

ಸಾಧನೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ ಎಂಬುದನ್ನು ರಾಧಾಕೃಷ್ಣನ್ ಅವರು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟಿದ್ದಾರೆ. ಜೀವನ ಹಾಗೂ ಸಮಯವೇ ಮನುಷ್ಯನಿಗೆ ಬಹುದೊಡ್ಡ ಶಿಕ್ಷಕರು. ಜೀವನ ಸಮಯದ ಸದುಪಯೋಗ ಕಲಿಸಿದರೆ, ಸಮಯ ಬದುಕಿನ ಮೌಲ್ಯವನ್ನು ತಿಳಿಸುತ್ತದೆ. ಶಿಕ್ಷಣವು ಜ್ಞಾನ ನೀಡುವುದರ ಜೊತೆಗೆ ಉತ್ತಮ ಮೌಲ್ಯ, ಕೌಶಲ್ಯ ಹಾಗೂ ಅನುಭವಗಳನ್ನು ಬೆಳೆಸುತ್ತದೆ. ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕರ ಮಾರ್ಗದರ್ಶನ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ತಂದೆ-ತಾಯಿಯ ಪ್ರೀತಿ, ತ್ಯಾಗ ಮತ್ತು ಮಹತ್ವವನ್ನು ವಿವರಿಸಿದ ಸಂದರ್ಭದಲ್ಲಿ ಸಭಾಂಗಣ ಭಾವುಕಗೊಂಡಿತು.

ಮುಖ್ಯ ಅತಿಥಿ ಎಂ.ಐ. ಬಿರಾದಾರ ಮಾತನಾಡಿ, ವ್ಯಕ್ತಿಯ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ನಾವೆಲ್ಲರೂ ಪುಣ್ಯವಂತರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಾದ ರಾಚಪ್ಪ ಬನ್ನಿದಿನ್ನಿ ಹಾಗೂ ಸುನಿಲ್ ಭಾಸ್ಕರ್ ಮಾತನಾಡಿದರು. ಮುಖ್ಯ ಶಿಕ್ಷಕಿ ರಾಜೇಶ್ವರಿ ಮುಳಜಿ, ಪೃಥ್ವಿ ಎಂ., ಅನಿತಾ ರಾಠೋಡ, ಹುಲಿಯಪ್ಪ, ಪೂಜಾ, ರೂಪಾ ಹಲಗಣಿ, ವಿಲಾಸ ಪಾಯಾಣಿ ಸೇರಿದಂತೆ ಶಿಕ್ಷಕ-ಶಿಕ್ಷಕಿಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ನೂತನ ಅಧ್ಯಕ್ಷರ ನೇಮಕ AICC ಪ್ರಕಟ

ಬೆಂಗಳೂರು: ಅಖಿಲ ಭಾರತ ಕಾಂಗ್ರೆಸ್ ಸಮಿತಿ ರಾಜ್ಯದ 35 ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ (ಡಿಸಿಸಿ) ನೂತನ ಅಧ್ಯಕ್ಷರನ್ನು ನೇಮಕ ಮಾಡಿ ಅಧಿಕೃತ ಆದೇಶ ಹೊರಡಿಸಿದೆ.

ಪ್ರಸ್ತುತ ನಡೆಯುತ್ತಿರುವ ಸಂಘಟನ್ ಸೃಜನ್ ಅಭಿಯಾನದ ಭಾಗವಾಗಿ ಈ ನೇಮಕಾತಿಗಳನ್ನು ಮಾಡಲಾಗಿದೆ.

ಂಐಅಅ ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯ ಪ್ರಕಾರ, ಪ್ರತಿ ಜಿಲ್ಲೆಯಲ್ಲೂ ನಿಯೋಜಿಸಲಾಗಿದ್ದ AICC ವೀಕ್ಷಕರು ನಡೆಸಿದ ವ್ಯಾಪಕ ಕ್ಷೇತ್ರಕಾರ್ಯ ಹಾಗೂ ಸಮಗ್ರ ಪರಿಶೀಲನೆಯ ಆಧಾರದ ಮೇಲೆ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿದೆ.

ಕಾಂಗ್ರೆಸ್ ಪಕ್ಷ ಕೈಗೊಂಡಿರುವ 'ಸಂಘಟನ್ ಸೃಜನ್ ಅಭಿಯಾನ'ದ ಭಾಗವಾಗಿ ಈ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿದೆ. ಈ ಅಭಿಯಾನದ ಅಡಿಯಲ್ಲಿ ಪ್ರತಿ ಜಿಲ್ಲೆಗೂ ಎಐಸಿಸಿ ವೀಕ್ಷಕರನ್ನು ನೇಮಿಸಲಾಗಿತ್ತು.

ವೀಕ್ಷಕರು ಸ್ಥಳೀಯ ಮಟ್ಟದಲ್ಲಿ ಕೂಲಂಕಷ ಪರಿಶೀಲನೆ ನಡೆಸಿ, ಪಕ್ಷದ ಪದಾಧಿಕಾರಿಗಳು ಹಾಗೂ ಪ್ರಮುಖ ನಾಯಕರೊಂದಿಗೆ ಚರ್ಚಿಸಿ ಸಮಗ್ರ ವರದಿ ಸಲ್ಲಿಸಿದ್ದರು.

ಈ ವರದಿಗಳ ಆಧಾರದ ಮೇಲೆ ಹಿರಿಯ ನಾಯಕರೊಂದಿಗೆ ವಿಸ್ತೃತ ಸಮಾಲೋಚನೆ ನಡೆಸಿದ ನಂತರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಪ್ರಕಟಣೆ ಹೊರಡಿಸಿದ್ದಾರೆ.

# ಕನ್ನಡ ಪುಸ್ತಕ ಮಾರಾಟ ಮೇಳ

ದಾವಣಗೆರೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಲಾಖೆಯು ಆಯೋಜಿಸಿರುವ ಕಲಾ ಸಂಗಮ ಕಾರ್ಯಕ್ರಮದ ಅಂಗವಾಗಿ ಕನ್ನಡ ಪುಸ್ತಕ ಪ್ರಾಧಿಕಾರವು ಸೆ.25 ರಿಂದ 27 ವರೆಗೆ ಕಲಾ ಸಂಗಮ ಕನ್ನಡ ಪುಸ್ತಕ ಮಾರಾಟ ಮೇಳ-2026"ನ್ನು ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ.ಈ ಪುಸ್ತಕ ಮೇಳದಲ್ಲಿ ಕನ್ನಡ ಪ್ರಕಾಶಕರು, ಮಾರಾಟಗಾರರು ಭಾಗವಹಿಸಲಿದ್ದಾರೆ.

# ಪ್ರತಿ ಗ್ರಾಪಂನಲ್ಲಿ ಕಣ್ಣಿನ ತಪಾಸಣಾ ಶಿಬಿರ: ಆರ್. ಉಗ್ರೇಶ್



ಪಟ್ಟನಾಯಕನಹಳ್ಳಿ : ಶಿರಾ ತಾಲೂಕಿನಲ್ಲಿನ ಜನತೆಯ ಆರೋಗ್ಯ ಸೇವೆ ಸಲ್ಲಿಸುವ ಭಾಗ್ಯ ನನಗು ಲಭಿಸಿದ್ದು ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಕಣ್ಣಿನ ತಪಾಸಣೆ ಶಿಬಿರಗಳನ್ನು ನಡೆಸುತ್ತೇನೆ ಇದರ ಉಪಯೋಗವನ್ನು ಪಡೆದುಕೊಳ್ಳುವಂತೆ ಶಿರಾ ಜೆಡಿಎಸ್ ನಾಯಕ ಆರ್. ಉಗ್ರೇಶ್ ಹೇಳಿದರು

ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿ ಶ್ರೀ ಗುರುಗ-ುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ಅವರಣದಲ್ಲಿ ಶಿರಾ ಲಯನ್ಸ್ ಕ್ಲಬ್ ಹಾಗೂ ಆರ್. ಉಗ್ರೇಶ್ ಅಭಿಮಾನಿ ಬಳಗ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ ಶಿಬಿರಕ್ಕೆ ಬರುವ ವೆಚ್ಚವನ್ನು ನಾನೇ ಬರಿಸುವುದ ಜೊತೆಗೆ ವಯೋವೃದ್ಧರ ತಂದೆ ತಾಯಿಗಳ ಸೇವೆ ಮಾಡುವ ಭಾಗ್ಯ ಕೂಡಿ ಬಂದಿದೆ ಮನುಷ್ಯನಿಗೆ ಕಣ್ಣು ಅತಿ ಮುಖ್ಯ ಕಣ್ಣಿನ ರಕ್ಷಣೆಯ ಪ್ರತಿಯೊಬ್ಬರ ಹೊಣೆಯಾಗಿದ್ದು ದೃಷ್ಟಿಹೀನವಾದಾಗ ತಕ್ಷಣ ತಪಾಸಣೆ ನಡೆಸಿ ಶಸ್ತ್ರ ಚಿಕಿತ್ಸೆ ಮಾಡಿಸುವುದು ಒಳ್ಳೆಯದು, ಈ ಸೇವೆಗೆ ತಾಲೂಕಿನಲ್ಲಿ ನಮ್ಮ ಅಭಿಮಾನಿ ಬಳಗ ನಿರಂತರವಾಗಿ ಕೆಲಸ ಮಾಡುತ್ತಿದೆ ಪ್ರತಿಯೊಬ್ಬರ ಸಹಕಾರವು ಅಗತ್ಯವಾಗಿ ಬೇಕಿದೆ ಎಂದರು

ನಿಕಟ ಪೂರ್ವ ಅಧ್ಯಕ್ಷ ಡಾ.ಮಂಜುನಾಥ್ ಮಾತನಾಡಿ ಸುಮಾರು ವರ್ಷಗಳಿಂದ ಸೇವೆ ನಿರಂತರವಾಗಿದ್ದು ಈ ಸೇವೆಗೆ ಪ್ರತಿಯೊಬ್ಬರ ಸ್ಪಂದಿಸಿದರೆ ಉತ್ತಮ, ಈಗಿನ ಆಹಾರ ಪದ್ಧತಿಯಲ್ಲಿ 50 ವರ್ಷಕ್ಕೆ ಕಣ್ಣುಗಳಲ್ಲಿ ದೋಷ ಉಂಟಾಗಿ ಪೂರೆ ಬಂದು ಕಣ್ಣು ಕಾಣದಂತಾಗಿ ತೊಂದರೆ ಅನುಭವಿಸುವ ಸಾಧ್ಯತೆ ಹೆಚ್ಚಿದೆ ಸಕಾಲದಲ್ಲಿ ಪರೀಕ್ಷಿಸಿಕೊಂಡು ಶಸ್ತ್ರಚಿಕಿತ್ಸೆ ಪಡೆಯುವುದು ಅಗತ್ಯವಾಗಿ ಆಗಬೇಕಿದೆ ಎಂದರು

ಶಿರಾ ಲಯನ್ಸ್ ಕ್ಲಬ್ ಅಧ್ಯಕ್ಷ ಹೆಂಜಾರಪ್ಪ, ಮಾತನಾಡಿ ನಮ್ಮ ದೇಹ ಭಗವಂತನಿಂದ ಸೃಷ್ಟಿಯಾಗಿದ್ದು ಈ ಬೌತಿಕ ದೇಹಕ್ಕೆ ಪ್ರತಿಯೊಂದು ಅಂಗಾಂಗವು ಅತಿ ಮುಖ್ಯವಾಗಿದ್ದು ಕಣ್ಣು ಅತಿ ಮುಖ್ಯವಾದ ಅಂಗವಾಗಿದ್ದು ದೃಷ್ಟಿ ವಂಚಿತವಾಗಿದ್ದರೆ ಕಣ್ಣಿನ ಪರೀಕ್ಷೆ ಒಳಪಟ್ಟು ದೃಷ್ಟಿಯನ್ನು ಪಡೆದುಕೊಳ್ಳಿ ಎಂದರು.

ಷಣ್ಮುಖಪ್ಪ, ಮೇಲ್ಕುಂಟೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಟಿ.ಡಿ. ನರಸಿಂಹಮೂರ್ತಿ, ಬರಗೂರು ಬಪ್ಪಣ್ಣ, ವೀರ ಬೊಮ್ಮನಹಳ್ಳಿ ನಾಗರಾಜ್, ಡಾ. ಶ್ರೀನಿವಾಸ್, ತುಳಸಿರಾಮ್,ಬಂದ ಕುಂಟೆ ಪ್ರಭು, ಈ ಶಿವಾನಂದ, ಕಲ್ಲೇಗೌಡ, ಯಶಸ್ವಿನಿ, ಟೈಲರ್ ರಂಗನಾಥ್, ವಸಂತಕುಮಾರ, ನಾಗಭೂಷಣ್, ಬಂದ ಕುಂಟೆ ಡೇರಿ ಅಧ್ಯಕ್ಷ ಉಮೇಶ್, ನೇರಳಹಳ್ಳಿ ಕುಮಾರ್ ಸೇರಿದಂತೆ ಹಲವಾರು ಮುಖಂಡರು ವೈದ್ಯರು ಇದ್ದರು.

# ಸತ್ಯದ ಧ್ವನಿಯನ್ನು ಮೌನ ಗೊಳಿಸಲಾಗದು– ಡಾ. ಹೆಚ್ ಕೃಷ್ಣಪ್ಪ ಗುಣಸಾಗರ



ಕೂಡ್ಲಿಗಿ :ಸಮಾಜದ ಕಟ್ಟ ಕಡೆಯ ಜನರ ನೋವು ಶ್ರಮ ಮತ್ತು ಹಕ್ಕುಗಳಿಗಾಗಿ ಸದಾ ಧ್ವನಿ ಎತ್ತುತ್ತ ಬಂದಿರುವ ರಾಜ್ಯದ ಧೀಮಂತ ನಾಯಕ ಬುದ್ಧ ಬಸವ ಅಂಬೇಡ್ಕರ್ ಅವರ ಸಮಾನತೆಯ ವಿಚಾರಧಾರೆಗಳನ್ನ ನಂಬಿಕೊಂಡು ನಡೆಯುತ್ತಿರುವ ಸತೀಶ್ ಜಾರಕಿಹೊಳಿ ನಿವಾಸಗಳು ಮತ್ತು ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ನಡೆದಿರುವ ಈಡಿ ಶೋಧ ಕ್ರಮವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ತನಿಖೆ ನಡೆಸುವುದು ಕಾನೂನು ಬದ್ಧ ಪ್ರಕ್ರಿಯೆಯಾದರೂ ಯಾವುದೇ ತನಿಖೆಯನ್ನು ರಾಜಕೀಯ ಒತ್ತಡ ಅಥವಾ ದ್ವೇಷದ ಸಾಧನವಾಗಿ ಬಳಸಬಾರದು,ಆರೋಪಗಳು ಸಾಬೀತಾಗುವ ಮುನ್ನವೇ ಒಬ್ಬ ಜನನಾಯಕ ದಲಿತಪರ ಧ್ವನಿ, ಶೋಷಿತರ ಸಂರಕ್ಷಕರ ಗೌರವಕ್ಕೆ ಧಕ್ಕೆ ತರುವ ಯಾವುದೇ ಪ್ರಯತ್ನವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ.

ಬಡವರು ದಲಿತರು ಶೋಷಿತರು ಕಾರ್ಮಿಕರ ಹಾಗೂ ದೇಶದ ಎಲ್ಲಾ ಸವಲತ್ತುಗಳಿಂದ ವಂಚಿತರ ಪರವಾಗಿ ನಿರಂತರವಾಗಿ ಮಾತನಾಡುವ ಧ್ವನಿಯನ್ನ ಇಂತಹ ಬೆದರಿಕೆಗಳಿಂದ ಕುಗ್ಗಿಸಲು ಸಾಧ್ಯವಿಲ್ಲ. ಸತೀಶ್ ಜಾರಕಿಹೊಳಿ ಹಿಂದೆ ಇಡೀ ರಾಜ್ಯಾದ್ಯಂತ ಕರ್ನಾಟಕ ಶುದ್ಧೀಕರಣ ವೇದಿಕೆಯ ಸಾವಿರ ಸದಸ್ಯರುಗಳು, ಕನ್ನಡಿಗರ ದಂಡೆ ಸತೀಶ್ ಜಾರಕಿಹೊಳೆ ಹಿಂದೆ ಇದೆ. ಶೋಷಿತರ ಧ್ವನಿಗೆ ಧ್ವನಿ ಸೇರಿಸಿ ಬಡವರಿಗೆ ಗಟ್ಟಿ ಧ್ವನಿ ಯಾಗುವ ಸತೀಶ್ ಜಾರಕಿಹೊಳಿಗೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಸತ್ಯ ಗೆಲ್ಲಲಿ, ಶೋಷಿತರ ಧ್ವನಿಗೆ ನ್ಯಾಯ ದೊರಕಲಿ ಎಂದು ಕರ್ನಾಟಕ ಶುದ್ಧೀಕರಣ ವೇದಿಕೆ ರಾಜ್ಯಾಧ್ಯಕ್ಷ ಡಾ.ಹೆಚ್ ಕೃಷ್ಣಪ್ಪ ಗುಣಸಾಗರ ಪತ್ರಿಕೆ ಹೇಳಿಕೆ ನೀಡಿದರು.

# ಕುಣಿಗಲ್ ತಹಶೀಲ್ದಾರ್ ಕರಿಯ ನಾಯಕ್‌ರ ಆಡಳಿತ ವೈಫಲ್ಯ!

## ಎಲ್‌ಎನ್‌ಡಿ ಹುದ್ದೆ ಖಾಲಿ: 20 ದಿನವಾದರೂ ನೇಮಕವಿಲ್ಲ–ಸಾರ್ವಜನಿಕರ ಅಲೆದಾಟ



ಕುಣಿಗಲ್: ತಾಲೂಕು ಕಚೇರಿಯ ಆಡಳಿತ ವ್ಯವಸ್ಥೆ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಎಲ್‌ಎನ್‌ಡಿ ವಿಭಾಗದ ಸಿಬ್ಬಂದಿ ಹುದ್ದೆ ತೆರವಾಗಿ 20 ದಿನ ಕಳೆದರೂ ಪರ್ಯಾಯ ಸಿಬ್ಬಂದಿ ನೇಮಕವಾಗಿಲ್ಲ. ಪರಿಣಾಮ ರೈತರು ಹಾಗೂ ಸಾರ್ವಜನಿಕರು ತಮ್ಮ ಅರ್ಜಿಗಳ ಕೆಲಸಕ್ಕಾಗಿ ಕಚೇರಿಗೆ ಪದೇಪದೇ ಅಲೆದಾಡುವಂತಾಗಿದೆ.

ಅರ್ಜಿಗಳ ವಿಲೇವಾರಿಗೆ ದಿನಕ್ಕೊಂದು ಸಬೂಬು ಹೇಳಿ ಸಾರ್ವಜನಿಕರನ್ನು ಸುತ್ತಾಡಿಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಜನರ ಸೇವೆ ಮಾಡಬೇಕಾದ ಕಚೇರಿಯೇ ಜನರಿಗೆ ಕಿರಿಕಿರಿ ನೀಡುವ ಕೇಂದ್ರವಾಗಿದೆಯೇ? ಎಂಬ ಆಕ್ರೋಶ ವ್ಯಕ್ತವಾಗಿದೆ.

ದಲಿತರ ವಿಚಾರದಲ್ಲೂ ನಿರ್ಲಕ್ಷ್ಯ?


ಇನ್ನೊಂದೆಡೆ, ಸುಮಾರು ಒಂದು ವರ್ಷದಿಂದ ದಲಿತರ ಕುಂದುಕೊರತೆ ಸಭೆ ನಡೆಸಿಲ್ಲ ಎಂಬ ಆರೋಪ ಗಂಭೀರ ಪ್ರಶ್ನೆ ಮೂಡಿಸಿದೆ. ದಲಿತರ ಸಮಸ್ಯೆಗಳನ್ನು ಆಲಿಸಬೇಕಾದ ತಾಲೂಕು ದಂಡಾಧಿಕಾರಿಗಳು ಅವರ ಕುಂದುಕೊರತೆಗಳಿಗೆ ಕಿವಿಗೊಡುತ್ತಿಲ್ಲವೇ ಎಂಬ ಅನುಮಾನ ದಲಿತ ಸಮುದಾಯದಲ್ಲಿ ಮೂಡಿದೆ.

ಸಿಬ್ಬಂದಿ ಕೊರತೆಗೆ ಪರ್ಯಾಯ ವ್ಯವಸ್ಥೆ ಮಾಡದೆ, ಸಾರ್ವಜನಿಕರ ಅರ್ಜಿಗಳನ್ನು ವಿಳಂಬಗೊಳಿಸಿ, ದಲಿತರ ಕುಂದುಕೊರತೆ ಸಭೆಯನ್ನೂ ನಡೆಸದಿರುವುದು ತಾಲೂಕು ಆಡಳಿತದ ಕಾರ್ಯವೈಖರಿಯ ಮೇಲೆಯೇ ಪ್ರಶ್ನಾರ್ಥಕ ಚಿಹ್ನೆ ಮೂಡಿಸಿದೆ.

ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗ ಅಧಿಕಾರಿಗಳು ಕೂಡಲೇ ಮಧ್ಯಪ್ರವೇಶಿಸಿ ತಾಲೂಕು ಕಚೇರಿಯ ಕಾರ್ಯವೈಖರಿ ಪರಿಶೀಲಿಸಿ, ಖಾಲಿ ಹುದ್ದೆಗೆ ಸಿಬ್ಬಂದಿ ನೇಮಿಸಿ, ಬಾಕಿ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕು. ದಲಿತರ ಕುಂದುಕೊರತೆ ಸಭೆಯನ್ನು ತಕ್ಷಣ ನಡೆಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಸರ್ಕಾರಕ್ಕೆ 100 ದಿನಗಳ ಸಂಭ್ರಮ

## ಐತಿಹಾಸಿಕ, ಪಾರಂಪಾರಿಕ ಸ್ಥಳಗಳಲ್ಲಿ ವಿದ್ಯುತ್ ದೀಪಾಲಂಕಾರ



ಚಾಮರಾಜನಗರ : ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರಕ್ಕೆ 100 ದಿನಗಳ ಸಂಭ್ರಮದ ಹಿನ್ನೆಲೆಯಲ್ಲಿ ಜಿಲ್ಲೆಯ ಹಲವೆಡೆ ಐತಿಹಾಸಿಕ ಪಾರಂಪಾರಿಕ ಪ್ರವಾಸಿತಣಗಳಲ್ಲಿ ವರ್ಣರಂಜಿತ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಜಿಲ್ಲೆಯ ಪ್ರಸಿದ್ದ ಹನೂರು ತಾಲೂಕಿನ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ದೇವಾಲಯ, ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ, ಕೊಳ್ಳೇಗಾಲ ತಾಲೂಕಿನ ಮಧ್ಯರಂಗ ದೇವಾಲಯ, ಸೋಮೇಶ್ವರ ದೇವಾಲಯ, ಶಿಂಷಾ ಮಾರಮ್ಮ ದೇವಾಲಯ, ಚಾಮರಾಜನಗರ ಪಟ್ಟಣದ ಶ್ರೀಚಾಮರಾಜೇಶ್ವರ ದೇವಾಲಯ ಸೇರಿದಂತೆ ಇತರೆಡೆ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಮುಖ್ಯಮಂತ್ರಿಗಳಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕೆ ಬಂದು 100 ದಿನಗಳು ಪೂರೈಸಿದ್ದು, ಈ ಅವಧಿಯಲ್ಲಿ ಅನೇಕ ಮಹತ್ತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿ : ಚಂದ್ರಶೇಖರಮೂರ್ತಿ



ಯಳಂದೂರು.ಕೆಸ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ದನಕರು, ಮೇವಿನ ಕೊರತೆ, ಸ್ವಚ್ಚತೆ ಸೇರಿದಂತೆ ಇತರೆ ಸಮಸ್ಯೆಗಳನ್ನು ಬಗ್ಗೆ ಹರಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ವಿಶೇಷ ಗ್ರಾಮಸಭೆಯನ್ನು ಆಯೋಜಿಸುವ ಮೂಲಕ ಕ್ರಮವಹಿಸಲಾಗುವುದು ಎಂದು ಕೆಸ್ತೂರು ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಚಂದ್ರಶೇಖರಮೂರ್ತಿ ತಿಳಿಸಿದರು.

ಅವರು ಕೆಸ್ತೂರು ಗ್ರಾಮದ ಮಾರಮ್ಮ ದೇವಸ್ಥಾನ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ 2025–26 ನೇ ಸಾಲಿನ ನರೇಗಾ ಹಾಗೂ 15 ನೇ ಹಣಕಾಸಿನ ಯೋಜನೆ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಕೆಸ್ತೂರು ಗ್ರಾಮದಲ್ಲಿ ಜಲ್ ಜೀವನ್ ಯೋಜನೆ ಕಾಮಗಾರಿ ಸಮರ್ಪಕವಾಗಿ ಮಾಡದ ಪರಿಣಾಮ ಜನರಿಗೆ ಕುಡಿಯುವ ನೀರಿನ ಸಮಸ್ಯೆಯು ಉಂಟಾಗುತ್ತಿದೆ. ಈ ಬಗ್ಗೆ ಜಲ್‌ಜೀವನ್ ಯೋಜನೆ ಜೆಇ ಹಾಗೂ ಪಿಡಿಒ ಗಮನಹರಿಸುತ್ತಿಲ್ಲ. ಇದ-ರಿಂದ ಜನರಿಗೆ ಕುಡಿಯುವ ನೀರಿನ ವಿಚಾರದಲ್ಲಿ ತುಂಬಾ ತೊಂದರೆಯಾಗುತ್ತಿದೆ, ಆದರಿಂದ ಕೂಡಲೇ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಜೆಜೆಎಂನ ಕಾಮಗಾರಿಯನ್ನು ಸಮರ್ಪಕವಾಗಿ ಮಾಡಬೇಕಾಗಿದೆ. ಗ್ರಾಮ ಸಭೆಗಳ ಬಗ್ಗೆ ಮುಖಂಡರು, ಗ್ರಾಮಸ್ಥರಿಗೆ ಸರಿಯಾದ ಮಾಹಿತಿಯನ್ನು ನೀಡುತ್ತಿಲ್ಲ. ಇದ-ರಿಂದ ಗ್ರಾಮಸ್ಥರಿಗೆ ಮಾಹಿತಿ ಇಲ್ಲ, ಇದನ್ನು ಎಲ್ಲರಿಗೂ ತಿಳಿಸುವ ಜವಾಬ್ದಾರಿ ಗ್ರಾಮ ಪಂಚಾಯಿತಿ ಅಧಿಕಾರಿಗಳ ಮೇಲಿದೆ ಎಂದು ಅಧಿಕಾರಿ, ಸಿಬ್ಬಂಧಿಯನ್ನು ತರಾಟೆ ತಗೆದುಕೊಂಡ ಘಟನೆಯೂ ನಡೆಯಿತು. ನಂತರ ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ಸಭೆ ಕರೆದು ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಭೆಯನ್ನು ಕರೆಯಲಾಗುವುದು ಎಂದು ತಿಳಿಸಿದರು. ನಂತರ ಲೆಕ್ಕ ಪರಿಶೋಧಕ ಪ್ರಸನ್ನ ಮಾತನಾಡಿ, ಕಳೆದ ಅವಧಿಯಲ್ಲಿ ಗ್ರಾಮ ಪಂಚಾಯಿತಿ 138, ತೋಟಗಾರಿಕೆ ಇಲಾಖೆ–02, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಇಲಾಖೆ –09, ಸೇರಿದಂತೆ ಒಟ್ಟು 149 ಕಾಮಗಾರಿಗಳನ್ನು ಕೈಗೊಂಡು ಕೂಲಿ ಮೊತ್ತ 81,99,485 ರೂ. ಸಾಮಾಗ್ರಿ ವೆಚ್ಚ 3,65,121 ರೂ. ಸೇರಿ ಒಟ್ಟು 85,64,606 ರೂ. ಗಳನ್ನು ಪಾವತಿಯಾಗಿದೆ. ಪ್ರಸುತ್ತ ವಿಜಿಬಿ ಜೀರಾಮ್‌ಜಿ ಯೋಜನೆಯಡಿಯಲ್ಲಿ 120 ದಿನಗಳ ಕಾಲ ಕೂಲಿ ಕೆಲಸಗಳನ್ನು ಮಾಡಲು ಅವಕಾಶವಿದೆ. ಸಾರ್ವಜನಿಕರು ಜಾಬ್ ಕಾರ್ಡ್ಗಳನ್ನು ಮಾಡಿಸಿಕೊಂಡು ವೈಯುಕ್ತಿಕ ಹಾಗೂ ಸಾಮೂಹಿಕ ಕಾರ್ಯಗಳನ್ನು ಮಾಡಿಸಿಕೊಳ್ಳುವ ಅವಕಾಶವಿದ್ದು ಇದರ ಬಳಕೆಯನ್ನು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಎಂದು ಸಭೆಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಪಿಡಿಒ ಮಹದೇವಸ್ವಾಮಿ, ನೋಡಲ್ ಅಧಿಕಾರಿ ಶಿಕುಮಾರ್, ಜೀರಾಮ್ ಜಿ ಯೋಜನೆಯ ಸಹಾಯಕ ನಿರ್ದೇಶಕ ರಾಕೇಶ್ ಸೇರಿದಂತೆ ಇತರರು ಹಾಜರಿದ್ದರು.

# ಪಳವಳ್ಳಿ ಅಂಬೇಡ್ಕರ್ ವಸತಿ ಶಾಲೆಗೆ ತಹಶೀಲ್ದಾರ್ ಭೇಟಿ: ಮೂಲಭೂತ ಸೌಕರ್ಯಗಳ ಪರಿಶೀಲನೆ



ಪಾವಗಡ: ತಾಲೂಕಿನ ಪಳವಳ್ಳಿಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ತಹಶೀಲ್ದಾರ್ ವೈ. ರವಿ ಅವರು ಭೇಟಿ ನೀಡಿ, ಶಾಲೆಯ ವಿವಿಧ ವಿಭಾಗಗಳನ್ನು ಪರಿಶೀಲಿಸಿ, ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದರು.

ವಸತಿ ಶಾಲೆಯ ಕಾರ್ಯನಿರ್ವಹಣೆ ಹಾಗೂ ಸೌಕರ್ಯಗಳ ಕುರಿತು ಸಾರ್ವಜನಿಕರಿಂದ ಮತ್ತು ಪೋಷಕರಿಂದ ಆಗಾಗ್ಗೆ ದೂರುಗಳು ಕೇಳಿಬರುತ್ತಿದ್ದ ಹಿನ್ನೆಲೆಯಲ್ಲಿ, ತಹಶೀಲ್ದಾರ್ ರವರು ಸ್ವತಃ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಶಾಲೆಯ ಸ್ವಚ್ಛತೆ, ವಿದ್ಯಾರ್ಥಿಗಳಿಗೆ ನೀಡುತ್ತಿರುವ ಊಟದ ವ್ಯವಸ್ಥೆ, ಶೌಚಾಲಯಗಳ ನಿರ್ವಹಣೆ, ಆಹಾರ ದಾಸ್ತಾನು ಕೊಠಡಿ ಹಾಗೂ ಅಡುಗೆ ಕೋಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದರು. ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯಗಳು ಮತ್ತು ಮಕ್ಕಳ ಯೋಗಕ್ಷೇಮದ ಬಗ್ಗೆ ಸಿಬ್ಬಂದಿಯನ್ನು ವಿಚಾರಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ತಹಶೀಲ್ದಾರ್ ವೈ. ರವಿ ಯವರು ಪಳವಳ್ಳಿ ವಸತಿ ಶಾಲೆಯ ಕುರಿತು ಸಾರ್ವಜನಿಕರಿಂದ ಮತ್ತು ಪೋಷಕರಿಂದ ಆಗಾಗ ದೂರುಗಳು ಬರುತ್ತಿದ್ದವು. ಆ ಹಿನ್ನೆಲೆಯಲ್ಲಿ ನಾನು ಇಂದು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಇಲ್ಲಿನ ಸ್ವಚ್ಛತೆ, ಊಟದ ವ್ಯವಸ್ಥೆ, ಶೌಚಾಲಯಗಳು, ಆಹಾರ ದಾಸ್ತಾನು ಕೊಠಡಿ ಹಾಗೂ ಅಡುಗೆ ಕೋಣೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಶಾಲೆಯ ಭದ್ರತೆಯ ಹಿತದೃಷ್ಟಿಯಿಂದ ಸೆಕ್ಯುರಿಟಿ ಗಾರ್ಡ್‌ಗಳನ್ನು ಬೇರೆ ಬೇರೆ ಶಾಲೆಗಳಿಗೆ ಬದಲಾಯಿಸಬೇಕು ಎಂದು ಸೂಚಿಸಿದ್ದು, ಈ ಕುರಿತು ಸಂಬಂಧಪಟ್ಟವರೊಂದಿಗೆ ಮಾತನಾಡಿದ್ದೇನೆ ಎಂದು ತಿಳಿಸಿದರು.

# ಸತೀಶ್ ಜಾರಕಿಹೊಳಿ ಮತ್ತು ಸಂಸದೆ ಪ್ರಿಯಾಂಕ ಜಾರಕಿಹೊಳಿ ಮನೆಗಳ ಮೇಲೆ ಇಡಿ ದಾಳಿ–ಜಿಲ್ಲಾ ಕಾಂಗ್ರೆಸ್ ಖಂಡನೆ




ದಾವಣಗೆರೆ : ಕರ್ನಾಟಕ ರಾಜ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಪುತ್ರಿ, ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರ ನಿವಾಸಗಳು ಮತ್ತು ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿರುವುದನ್ನು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ ಖಂಡಿಸಿದರು.

ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಪುತ್ರಿ, ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರ ನಿವಾಸಗಳು ಮತ್ತು ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿರುವುದನ್ನು ಖಂಡಿಸಿರುವ ಜಿಲ್ಲಾ ಕಾಂಗ್ರೆಸ್, ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಪ್ರತಿಪಕ್ಷ ನಾಯಕರನ್ನು ಬೆದರಿಸಲು ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಎನ್‌ಡಿಎ ಸರ್ಕಾರದ ಅಡಿಯಲ್ಲಿ ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ ಮತ್ತು ಸಿಬಿಐಗಳನ್ನು ಪ್ರತಿಪಕ್ಷಗಳ ನಾಯಕರನ್ನು ಬೆದರಿಸಲು ಹಾಗೂ ಮತ್ತೊಮ್ಮೆ ವಾಷಿಂಗ್ ಮೆಷಿನ್ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿದರು. ಸತೀಶ್ ಜಾರಕಿಹೊಳಿ ಅವರು ಪಕ್ಷದ ಹಿರಿಯ ನಾಯಕ ಹಾಗೂ ರಾಜ್ಯ ಸರ್ಕಾರದ ಸಚಿವರಾಗಿದ್ದಾರೆ, ಸುಪ್ರೀಂ ಕೋರ್ಟ್ ಈಗಾಗಲೇ ಇಡಿಯನ್ನು ತರಾಟೆಗೆ ತೆಗೆದುಕೊಂಡಿದೆ. ಆದರೆ, ಅದರಿಂದ ಅವರು ಇನ್ನೂ ಯಾವುದೇ ಪಾಠ ಕಲಿತಿಲ್ಲ ಎಂದು ತೋರುತ್ತದೆ ಎಂದು ತಿಳಿಸಿದರು.

# ಮಳೆ ಇಲ್ಲದೆ ಎದುರಾದ ತೀವ್ರ ಸ್ವರೂಪದ ಬರ

ದಾವಣಗೆರೆ : ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಮಳೆ ಇಲ್ಲದೆ ತೀವ್ರ ಸ್ವರೂಪದ ಬರ ಎದುರಾಗಿದೆ. ಬಿರು ಬಿಸಿಲಿನ ತಾಪಮಾನ ಬೇಸಿಗೆಗಿಂತ ಜೋರಾಗಿದ್ದು, 35 ಡಿಗ್ರಿ ದಾಖಲಾಗಿದೆ. ಮಳೆ ನಂಬಿ ಬಿತ್ತಿದ ಬೆಳೆಗಳು ಒಣಗುತ್ತಿವೆ. ಆದ್ದರಿಂದ ಕೆರೆ ಕಟ್ಟೆ ಹಳ್ಳ ಕೊಳ್ಳಗಳನ್ನು ತುಂಬಿಸಿಕೊಳ್ಳಲು ಭದ್ರಾ ಜಲಾಶಯದ ನೀರನ್ನು ಕಾಲುವೆಗಳಿಗೆ ಈ ತಿಂಗಳ ಅಂತ್ಯದವರೆಗೆ ಹರಿಸಬೇಕು ಎಂದು ಜಿಲ್ಲಾ ರೈತರ ಒಕ್ಕೂಟದ ಅಧ್ಯಕ್ಷ ಕೋಳೆನಹಳ್ಳಿ ಬಿ ಎಂ ಸತೀಶ್ ರವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ತಿಂಗಳಲ್ಲಿ ಒಂದೇರಡು ಸಲ ಮಳೆ ಬರುತ್ತದೆ. ಬೆಳೆದ ತೋಟಗಳ ನಿರ್ವಹಣೆ ಆಗುತ್ತದೆ ಎಂದು ನಂಬಿದ ರೈತರು ತೀವ್ರ ಬಿರು ಬಿಸಿಲಿನ ತಾಪಮಾನದಿಂದ ಕಂಗಾಲಾಗಿದ್ದಾರೆ. ಜಿಲ್ಲೆಯಲ್ಲಿ ತೀವ್ರ ಬರದ ವಾತಾವರಣ ಇದ್ದು, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಸೂಪರ್ ಎಲ್ ನಿನೊ ಎಫೆಕ್ಟ್ ತೀವ್ರವಾಗಿದೆ. ರೈತರು ದಿಕ್ಕು ತೋಚದೇ ಕಂಗೆಟ್ಟಿದ್ದಾರೆ. ಜಲಾಶಯದಲ್ಲಿ ನೀರು ಸಂಗ್ರಹ ಉಳಿಸಿಕೊಂಡು ಬೇಸಿಗೆ ಹಂಗಾಮಿನಲ್ಲಿ ಜನವರಿ ಮೊದಲ ವಾರದಿಂದ ಮೇ ತಿಂಗಳ ಅಂತ್ಯದವರೆಗೆ ನೀರು ಹರಿಸಿದ್ರೆ ಬೆಳೆ ಬೆಳೆಸಿಕೊಳ್ಳಲು ಮತ್ತು ತೋಟಗಳ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಬಹುತೇಕ ರೈತರ ಅಪೇಕ್ಷೆ ಆಗಿತ್ತು. ಆದರೆ ಕೋಟೆ ನಾಡು ಚಿತ್ರದುರ್ಗ ಬರದ ನಾಡಿಗೆ ನಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ 100 ದಿನಗಳೊಳಗೆ ನೀರು ಹರಿಸಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ರವರು ಭದ್ರಾ ಜಲಾಶಯದಿಂದ ಭದ್ರಾ ಮೇಲ್ದಂಡೆಗೆ ನೀರು ಹರಿಸಿದರು.




# ಸೀತಾಸರ್ಕಲ್ ಶ್ರೀಕೃಷ್ಣನ್ ಮನೆಯ ಲಿರಿಕಲ್‌ಹಾಡು

ತನ್ನ ವಿಭಿನ್ನ ಶೀರ್ಷಿಕೆಯ ಮೂಲಕ ಪ್ರೇಕ್ಷಕರಲ್ಲಿ ತೀವ್ರ ಕುತೂಹಲ ಮೂಡಿಸಿರುವ ಸೀತಾಸರ್ಕಲ್ ಶ್ರೀಕೃಷ್ಣನ್ ಮನೆ ಚಿತ್ರತಂಡದಿಂದ ಹೊಸ ಅಪ್ಡೇಟ್ ಹೊರಬಿದ್ದಿದೆ. ಮಹಾನ್ ಸಿನಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಪ್ರತೀತ್ ಅಕ್ಕಿ ಅವರು ನಿರ್ಮಿಸಿರುವ ಈ ಕಾಮಿಡಿ ಥ್ರಿಲ್ಲರ್ ಡ್ರಾಮಾ ಸಿನಿಮಾದ ಕಳ್ಳೇ ಬೀಜ ಕಿತ್ತುಕೊಂಡ್ ಹೋದ್ಲು' ಎಂಬ ಹಾಡಿನ ಲಿರಿಕಲ್ ವಿಡಿಯೋ ಬಿಡುಗಡೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ.

ಈ ಹಾಡಿಗೆ ಗಾಯಕ ದಿವ್ಯಕುಮಾರ್ ಧ್ವನಿಯಾಗಿದ್ದು, ರಾಘವೇಂದ್ರ ವಿ. ಅವರ ಆಕರ್ಷಕ ಸಂಗೀತ ಸಂಯೋಜನೆ ಕೇಳುಗರನ್ನು ಗುನುಗುವಂತೆ ಮಾಡಿದೆ. ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ನಿರ್ದೇಶನದ ಜವಾಬ್ದಾರಿ ಹೊತ್ತಿರುವ ಅಭಿನಂದನ್ ದೇಶಪ್ರಿಯ ಅವರೇ ಈ ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ಭೂಷಣ್ ಅವರ ನೃತ್ಯ ನಿರ್ದೇಶನ ಮತ್ತು ಉಜ್ವಲ್‌ಚಂದ್ರ ಅವರ ಸಂಕಲನ ಹಾಡಿನ ದೃಶ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದು, ಯುವ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ಹೊಸತನ ಮತ್ತು ಪ್ರಯೋಗಶೀಲತೆಯೊಂದಿಗೆ ಗಾಂಧಿನಗರಕ್ಕೆ ಎಂಟ್ರಿ ಕೊಟ್ಟಿರುವ ಈ ಚಿತ್ರತಂಡ ಈಗಾಗಲೇ ಚಿತ್ರದ ಚಿತ್ರೀಕರಣ ಪೂರ್ಣಗೊಳಿಸಿದೆ. ಬೆಂಗಳೂರು, ಸಕಲೇಶಪುರ, ಮಡಿಕೇರಿ ಮತ್ತು ಹೊನ್ನಾವರದ ಸುಂದರ ತಾಣಗಳಲ್ಲಿ ವಿಷ್ಣುಪ್ರಸಾದ್, ವಿಶ್ವ ಪಾಟೀಲ್ ಹಾಗೂ ವಿದ್ಯಾಕಿರಣ್ ಅವರ ಕ್ಯಾಮೆರಾ ಕಣ್ಣಿನಲ್ಲಿ ಸಿನಿಮಾ ಸೆರೆಯಾಗಿದೆ. ಚೇತನ್‌ರಾವ್ ಅವರ ಹಿನ್ನೆಲೆ ಸಂಗೀತ ಹಾಗೂ ಚಂದ್ರು ಬಂಡೆ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದ್ದು, ಸದ್ಯ ಕೊನೆಯ ಹಂತದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸಾಗುತ್ತಿವೆ.



ಈ ಚಿತ್ರದಲ್ಲಿ ಯುವನ್ ಹಣಕೋಡ್ ಹಾಗೂ ಅರ್ಜುನ್ ವೇದಾಂತ ಜೊತೆಗೆ ರಕ್ಷಿತಾ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಇವರೊಂದಿಗೆ ಹಿರಿಯನಟ ದತ್ತಣ್ಣ, ವಿಜಯ್ ಚಂಡೂರ್, ನವೀಂದ್ರ, ಅನಿಲ್‌ಸಿದ್ದು, ನಾಗರಾಜ್ ಮೂರ್ತಿ, ಮಿಮಿಕ್ರಿ ಗೋಪಿ, ಮನ್ದೀಪ್ ರಾಯ್, ಪ್ರಶಾಂತ್ ವೈ.ಎನ್. ಮತ್ತು ವಿ.ರವಿಶಂಕರ್‌ನಾಗ್ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ಎಲ್ಲಿಯ ಸೀತಾ? ಎಲ್ಲಿಯ ಕೃಷ್ಣ? ಆ ಮನೆಯ ಮರ್ಮವೇನು ಎಂಬ ಕುತೂಹಲವನ್ನು ಹುಟ್ಟುಹಾಕಿರುವ ಚಿತ್ರತಂಡ, ಶೀಘ್ರದಲ್ಲೇ ಚಿತ್ರವನ್ನು ರಿಲೀಸ್ ಮಾಡಲು ಸಿದ್ದತೆ ಮಾಡಿಕೊಂಡಿದೆ.

ವಿಜಯ್ ದೇವರಕೊಂಡ–ರಶ್ಮಿಕಾ ಮಂದಣ್ಣ ಕಾಂಬಿನೇಷನ್

# ವಿಜಯದಶಮಿ ಹಬ್ಬಕ್ಕೆ ರಣಬಾಲಿ



ತೆಲುಗು ಚಿತ್ರರಂಗದ ಸ್ಟಾರ್ ನಟ ವಿಜಯ್ ದೇವರಕೊಂಡ ಹಾಗೂ ನಿರ್ದೇಶಕ ರಾಹುಲ್ ಸಂಕೃತ್ಯನ್ ಅವರ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಪ್ಯಾನ್–ಇಂಡಿಯಾ ಆ್ಯಕ್ಷನ್ ಎಪಿಕ್ ರಣಬಾಲಿ ಚಿತ್ರದ ಟೀಸರ್ ಇದೀಗ ಬಿಡುಗಡೆಯಾಗಿದೆ. 1854ರಿಂದ 1878ರ ನಡುವಿನ ಬ್ರಿಟಿಷ್ ಆಳ್ವಿಕೆಯ ಕಾಲಘಟ್ಟದಲ್ಲಿ ರಾಯಲಸೀಮೆ ಪ್ರಾಂತ್ಯದಲ್ಲಿ ನಡೆದ ರೋಚಕ ನೈಜ ಘಟನೆಗಳನ್ನು ಆಧರಿಸಿ ಈ ಪಿರಿಯಾಡಿಕ್ ಡ್ರಾಮಾವನ್ನು ತೆರೆಗೆ ತರಲಾಗುತ್ತಿದ್ದು, ಚಿತ್ರದಲ್ಲಿ ವಿಜಯ್ ದೇವರಕೊಂಡ ಶಕ್ತಿಶಾಲಿ ಯೋಧನಾಗಿ ಅಬ್ಬರಿಸಿದ್ದಾರೆ. ಟಾಲಿವುಡ್ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿಮೇಕರ್ಸ್ ನಿರ್ಮಾಣದ ಈ ಚಿತ್ರ ದಸರಾ ಕೊಡುಗೆಯಾಗಿ ಅ.16ರಂದು ವಿಶ್ವಾದ್ಯಂತ ತೆರೆಕಾಣಲಿದೆ.

ಈ ಚಿತ್ರದಲ್ಲಿ ವಿಜಯ್ ದೇವರಕೊಂಡ ರಣಬಾಲಿ ಎಂಬ ಪರಾಕ್ರಮಿ ಯೋಧನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೆ, ನ್ಯಾಷನಲ್ ಕ್ರಶ್ ರಶ್ಮಿಕಾ ಮಂದಣ್ಣ ಅವರ ಪತ್ನಿ 'ಜಯಮ್ಮ'ನ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಹಾಲಿವುಡ್‌ನ ಖ್ಯಾತ ನಟ ಅರ್ನಾಲ್ಡ್ ವೋಸ್ಲೂ ಈ ಚಿತ್ರದಲ್ಲಿ ಬ್ರಿಟಿಷ್ ಅಧಿಕಾರಿ ಹಾಗೂ ಖಳನಾಯಕನಾಗಿ ನಟಿಸಿರುವುದು ಚಿತ್ರದ ತೂಕವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದಿದೆ. ಈ ಹಿಂದೆ ಗೀತ ಗೋವಿಂದಂ ಮತ್ತು ಡಿಯರ್ ಕಾಮ್ರೇಡ್ ಚಿತ್ರಗಳಲ್ಲಿ ಪ್ರೇಕ್ಷಕರನ್ನು ಮೋಡಿ ಮಾಡಿದ್ದ ವಿಜಯ್ ಮತ್ತು ರಶ್ಮಿಕಾ, ಈ ಚಿತ್ರದಲ್ಲಿ ಮೂರನೇಬಾರಿಗೆ ಒಟ್ಟಿಗೆ ನಟಿಸುತ್ತಿದ್ದಾರೆ. ದಂಪತಿಯಾದ ನಂತರ ಈ ಹಿಟ್ ಜೋಡಿಯಿಂದ ಬರುತ್ತಿರುವ ಮೊದಲ ಸಿನಿಮಾ ಇದಾಗಿರುವುದರಿಂದ ಚಿತ್ರದ ಮೇಲಿನ ನಿರೀಕ್ಷೆ ದುಪ್ಪಟ್ಟಾಗಿದೆ.

ಕಥೆಯ ಗಾಂಭೀರ್ಯದ ಬಗ್ಗೆ ತಿಳಿಸಿರುವ ಚಿತ್ರತಂಡ, "ಅವರು ಆ ಕಥೆಯನ್ನು ಹೂತುಹಾಕಿದರು... ಅವರು ಆ ಹೆಸರನ್ನು ಅಳಿಸಿ ಹಾಕಿದರು. ತಮ್ಮ ಪಾಪಗಳನ್ನು ತೊಡೆದುಹಾಕಲು ಯತ್ನಿಸಿದರು. ಆದರೆ ಆತನ ಎದೆಯಲ್ಲಿದ್ದ ರೌದ್ರಾಗ್ನಿಯನ್ನು ಮಾತ್ರ ಯಾರಿಂದಲೂ ಹೂತುಹಾಕಲು ಸಾಧ್ಯವಾಗಲಿಲ್ಲ. ಜಾನಪದ ಕಥೆಗಳು ಮತ್ತು ಇತಿಹಾಸ ಆತನನ್ನು ಎಂದಿಗೂ ಮರೆಯುವುದಿಲ್ಲ. ಇದು ರಣಬಾಲಿ ಎಂಬ ಯೋಧನ ಪ್ರತಿಜ್ಞೆ" ಎಂದು ರೋಷಾವೇಷದ ಸಾಲುಗಳನ್ನು ಹಂಚಿಕೊಂಡಿದೆ. ಮತ್ತೊಂದೆಡೆ ನಾಯಕ ವಿಜಯ್ ದೇವರಕೊಂಡ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡರು.

# ಫ್ಯೂಯೆಲ್ ಇಂಧನದ ಸುತ್ತ ಭ್ರಷ್ಟಾಚಾರದ ಹುತ್ತ..



ಡಿ.ಯೋಗರಾಜ್ ಅವರ ನಿರ್ದೇಶನದ ಮತ್ತೊಂದು ಚಿತ್ರ ಫ್ಯುಯಲ್ ಇತ್ತೀಚೆಗಷ್ಟೇ ಸೆಟ್ಟೇರಿದೆ, ಈ ಚಿತ್ರದ ಮುಹೂರ್ತ ಸಮಾರಂಭ ರೇಣುಕಾಂಬ ಸ್ಟುಡಿಯೋದಲ್ಲಿ ನಡೆಯಿತು. ನೀಲಕಂಠ ಫಿಲಂ ಸ್ಟುಡಿಯೋ ಪ್ರೊಡಕ್ಷನ್ ಅಡಿಯಲ್ಲಿ ನೀಲಕಂಠ ಮತ್ತು ಸಂಪ್ರೀತ್ ಕಬ್ಬಾಳ ಕೆಟಿಆರ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಛಾಯಾಗ್ರಹಣ ಮತ್ತು ನಿರ್ದೇಶನದ ಜವಬ್ದಾರಿಯನ್ನು ಡಿ.ಯೋಗರಾಜ್ ಅವರೇ ಹೊತ್ತುಕೊಂಡಿದ್ದಾರೆ. 1980–1988ರ ಸಮಯದಲ್ಲಿ ನಡೆಯುವ ಘಟನೆಗಳನ್ನು ಈ ಚಿತ್ರ ಒಳಗೊಂಡಿದೆ, ಹಿಂದೆ–ಂದೂ ಕೇಳಿರದ ಸತ್ಯ ಅಂಶಗಳು, ಹೊಗೆಯ ಹಿಂದೆ ಅಡಗಿರುವ ಸತ್ಯಾಂಶಗಳು ಎಂಬ ಪದಗಳನ್ನು ಒಳಗೊಂಡ ಈ ಚಿತ್ರದ ಪೋಸ್ಟರ್ ಚಿತ್ರದ ಬಹುತೇಕ ಕಥೆಯನ್ನು ಹೇಳುತ್ತದೆ. ಈ ತಂಡಕ್ಕೆ ಶುಭ ಹಾರೈಸಲು ಖಳನಟ ಉಗ್ರಂರವಿ ಅವರು ಆಗಮಿಸಿದ್ದರು. ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕ ಯೋಗರಾಜ್, ಇದು ನನ್ನ ನಿರ್ದೇಶನದ ಆರನೇ ಚಿತ್ರ. ನಾನು ಸುಮಾರು ಇಪ್ಪತ್ತು ವರ್ಷಗಳವರೆಗೆ ಪೆಟ್ರೋಲಿಯಂ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದು, ಅಲ್ಲಿ ನಡೆಯುವ ಭ್ರಷ್ಟವ್ಯವಸ್ಥೆ, ಕಳ್ಳಸಾಗಣೆ ಮತ್ತು ವಂಚನೆಗಳ ಸರಮಾಲೆಗಳನ್ನು ಇಟ್ಟುಕೊಂಡು ಈ ಚಿತ್ರದ ಕಥೆ ಮಾಡಿದ್ದೇನೆ. ಇದರ ಹಿಂದೆ ಹಲವಾರು ಕಾಣದ ಕೈಗಳು, ರಾಜಕೀಯ ಹಸ್ತಕ್ಷೇಪ ಕೂಡ ಇದೆ, ಸಾಮಾನ್ಯ ಜನರಿಗೆ ತಮ್ಮ ಕಣ್ಣಮುಂದೆ ಅಕ್ರಮಗಳು ನಡೆಯುತ್ತಿದ್ದರೂ, ಅದು ಅವರಿಗೆ ತಿಳಿಯದ ಕಾರಣ, ಯಾರೂ ಸಹ ಪ್ರಶ್ನೆಮಾಡಲು ಹೋಗುವುದಿಲ್ಲ. ಇವೆಲ್ಲವನ್ನು ಸಮಾಜಕ್ಕೆ ಅರಿವು ಮೂಡಿಸುವ ಜತೆಗೆ ಫ್ಯಾಮಿಲಿ ಸೆಂಟಿಮೆಂಟ್ ಕಥಾನಕ ಇಟ್ಟು–ಕೊಂಡು ಈ ಚಿತ್ರ ಮಾಡುತ್ತಿದ್ದೇನೆ. ಚಿತ್ರಕಥೆಯಲ್ಲಿ ಕೃತಿಕಾ. ಎನ್ ಅವರು ನೆರವಾಗಿದ್ದಾರೆ. ಸನ್ನಿವೇಶಕ್ಕೆ ಅನುಗುಣವಗಿ ವಿಎಫ್‌ಎಕ್ಸ್ ಪ್ರಮುಖವಾಗಿ ಕಾರ್ಯನಿರ್ವಹಿಸಲಿದೆ ಎಂದು ಡಿ.ಯೋಗರಾಜ್ ಅವರು ಚಿತ್ರದ ಬಗ್ಗೆ ಒಂದಷ್ಟು ಮಾಹಿತಿಗಳನ್ನು ತೆರೆದಿಟ್ಟರು.

# 'ಕಲೀಲಾ' ಕೋಪಿಷ್ಠನ ಲೈಫ್ ಸ್ಟೋರಿ



ಇತ್ತೀಚಿನ ದಿನಗಳಲ್ಲಿ ತೆರೆಗೆ ಬರುತ್ತಿರುವ ಕೆಲವು ಚಲನಚಿತ್ರಗಳ ಶೀರ್ಷಿಕೆಯೇ ವಿಶೇಷವಾಗಿರುತ್ತವೆ. ಅಂಥಾ ಮತ್ತೊಂದು ಚಿತ್ರವೇ 'ಕಲೀಲಾ'. ಇದು ಚಿತ್ರದ ನಾಯಕನ ಹೆಸರು. ಕೆ.ರಾಘವ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಮುಹೂರ್ತ ಸಮಾರಂಭ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ನಡೆಯಿತು. ಕಲೀಲಾ ಚಿತ್ರದ ಮೊದಲ ದೃಶ್ಯಕ್ಕೆ ನಿರ್ದೇಶಕ ಸಿಂಪಲ್ ಸುನಿ ಅವರು ಕ್ಲಾಪ್ ಮಾಡಿ ತಂಡ–ಕ್ಕೆ ಶುಭ ಹಾರೈಸಿದರು. ಕೆವಿಆರ್ ಪಿಕ್ಚರ್ಸ್ ಈ ಚಿತ್ರದ ನಿರ್ಮಾಣದ ಜವಬ್ದಾರಿ ಹೊತ್ತುಕೊಂಡಿದೆ. ನಿರ್ದೇಶಕ ಕೆ.ರಾಘವ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ನಂತರ ಮಾತನಾಡುತ್ತ ಕಲೀಲಾ ಮಾಸ್ ಕಂಟೆಂಟ್ ಜತೆಗೆ ಅಣ್ಣ ತಂಗಿ ನಡುವಿನ ಬಾಂಧವ್ಯದ ಬಗ್ಗೆ ಹೇಳುವ ಚಿತ್ರ 'ಒಂದು ನಿಮಿಷದ ಕೋಪ, ಜೀವನವೆಲ್ಲ ತಾಪ' ಎಂಬ ನಾಣ್ಣುಡಿಯಂತೆ ಏನೂ ಅರಿಯದ ಮುಗ್ದ ಹುಡುಗನೊಬ್ಬ ಕೋಪದಲ್ಲಿ ಒಂದು ತಪ್ಪು ಮಾಡಿ, ಮುಂದೆ ಅದರಿಂದ ಎದುರಾಗುವ ನೋವು, ಅನಾಹುತಗಳನ್ನು ಹೇಗೆ ಎದುರಿಸುತ್ತಾನೆ? ಎಂಬುದನ್ನು ಈ ಚಿತ್ರದಲ್ಲಿ ಕುತೂಹಕಲರವಾಗಿ ಹೇಳಲಿದ್ದೇವೆ. ಒಂದಷ್ಟು ಬಿಸಿ ರಕ್ತದ ಹುಡುಗಿಯರು ಸಮಾಜದಲ್ಲಿ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನೂ ಚಿತ್ರದಲ್ಲಿ ಹೇಳುತ್ತಿದ್ದೇವೆ. ಬಿಜಾಪುರದಲ್ಲಿ ಚಿತ್ರದ ಕಥೆ ಆರಂಭವಾಗುತ್ತದೆ. ಹೆಚ್ಚಿನ ವಿವರಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಹೇಳಿದರು.

# ಯಜಮಾನ ನಿರ್ಮಾಪಕರ ಹೊಸ ಚಿತ್ರ ವಿಷ್ಣುವಲ್ಲಭ

ದಶಕಗಳ ಹಿಂದೆ ಯಜಮಾನ ಎಂಬ ಸೂಪರ್‌ಹಿಟ್ ಚಿತ್ರವನ್ನು ನಿರ್ಮಿಸಿದ್ದ ರೆಹಮಾನ್ ಅವರೀಗ ಮತ್ತೊಂದು ಚಿತ್ರ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಚಿತ್ರದ ಹೆಸರು ವಿಷ್ಣುವಲ್ಲಭ. ಈ ಚಿತ್ರಕ್ಕೆ ರಥಾವರ ಖ್ಯಾತಿಯ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಶಾನ್, ಸಾನ್ಯ ಅಯ್ಯರ್ ನಾಯಕ ನಾಯಕಿಯಾಗಿ ನಟಿಸುತ್ತಿರುವ ವಿಷ್ಣುವಲ್ಲಭ ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು. ಸಚಿವ ಜಮೀರ್ ಅಹ್ಮದ್ ಖಾನ್ ಚಿತ್ರದ ಪ್ರಥಮ ದೃಶ್ಯಕ್ಕೆ ಆರಂಭಫಲಕ ತೋರಿಸಿದರು. ನಿರ್ಮಾಪಕ ಕೆ.ಮಂಜು ಕ್ಯಾಮೆರಾ ಚಾಲನೆ ಮಾಡಿದರು.

ಯಜಮಾನ, ಹುಚ್ಚ, ಮದುವೆಮನೆ ಸೇರಿದಂತೆ ಅನೇಕ ಸೂಪರ್‌ಹಿಟ್ ಚಿತ್ರಗಳನ್ನು ನಿರ್ಮಿಸಿರುವ ಆರ್. ಆರ್.ಫಿಲಂಸ್ ಮೂಲಕ ರುಹಿನಾ ರೆಹಮಾನ್ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ, ರೆಹಮಾನ್ ಅವರ ಪುತ್ರಿಯೂ ಆದ ರುಹಿನಾ ಅವರು ಈಹಿಂದೆ ಗಣೇಶ್ ಅಭಿನಯದ ಮದುವೆಮನೆ ಚಿತ್ರವನ್ನು ನಿರ್ಮಿಸಿದ್ದರು, ವಿಭಿನ್ನ ಪ್ರೇಮಕಥಾನಕ ಒಳಗೊಂಡ ವಿಷ್ಣುವಲ್ಲಭ ಚಿತ್ರಕ್ಕೆ ರುಹಿನಾ ಅವರೇ ಕಥೆ ಬರೆದಿದ್ದಾರೆ. ಜತೆಗೆ ಕ್ರಿಯೇಟಿವ್ ಹೆಡ್ ಅಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಚಂದ್ರಶೇಖರ್ ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ, ರವಿವರ್ಮ ಅವರ ಸಾಹಸ ನಿರ್ದೇಶನ ಹಾಗೂ ಶ್ರೀಧರ್ ವಿ. ಸಂಭ್ರಮ್ ಅವರ ಸಂಗೀತ ನಿರ್ದೇಶನ ಇರುವ ವಿಷ್ಣುವಲ್ಲಭ ಚಿತ್ರಕ್ಕೆ ರಾಜಶೇಖರ್ ಸಂಭಾಷಣೆಗಳನ್ನು ಬರೆದಿದ್ದಾರೆ.



ಶಾನ್ ಈ ಚಿತ್ರದ ನಾಯಕನಾಗಿ ಅಭಿನಯಿಸುತ್ತಿದ್ದು, ಇದು ಅವರಿಗೆ ಮೊದಲ ಚಿತ್ರ. ನಟನೆಗೆ ಬೇಕಾದ ಪೂರ್ವತಯಾರಿ ಮಾಡಿಕೊಂಡಿದ್ದಾರೆ. ಪುಟ್ಟಗೌರಿ ಮದುವೆ, ಬಿಗ್‌ಬಾಸ್ ಖ್ಯಾತಿಯ ಸಾನ್ಯಅಯ್ಯರ್ ಈ ಚಿತ್ರದ ನಾಯಕಿ. ಅವಿನಾಶ್, ಸಂಪತ್, ಸಂಗೀತ, ಸ್ವಾತಿ, ಯಶ್ ಶೆಟ್ಟಿ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಮುಂದಿನ ವಾರದಿಂದ ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಪಾರಂಭವಾಗಲಿದೆ.

# ಸಾವಿನ ಮನೆಯಲ್ಲಿ ಲವ್ ಫ್ಯಾಮಿಲಿ ಹಾಡು

ಡಬಲ್ ಇಂಜಿನ್, ಫಾರೆಸ್ಟ್ ಖ್ಯಾತಿಯ ಚಂದ್ರಮೋಹನ್ ಅವರ ನಿರ್ದೇಶನದ ಲವ್ ಟುವರ್ಡ್ಸ್ ಫ್ಯಾಮಿಲಿ ಚಿತ್ರದ ಕುಂದಾಪುರದ ಹೆಣ್ಣಿವಳು ಎಂಬ ಮೆಲೋಡಿ ಹಾಡಿನ ಬಿಡುಗ–ಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಆನಂದಲೀಲಾ ಅವರ ಸಂಗೀತ ಸಂಯೋಜನೆಯ ಈ ಹಾಡಿಗೆ ವಿಜಯ್‌ಪ್ರಕಾಶ್ ದನಿಯಾಗಿದ್ದಾರೆ. ಈ ಹಾಡನ್ನು ನಟ ಮನೋರಂಜನ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕ ಭರ್ಜರಿ ಚೇತನ್, ಮಹೇಶ್‌ಕುಮಾರ್, ನಟ ಮಂಜು ಪಾವಗಡ ಅತಿಥಿಗಳಾಗಿ ಆಗಮಿಸಿದ್ದರು. ಲಿಂಗರಾಜ್ ಬೀದರ್ ಅವರ ನಿರ್ಮಾಣದ ಈ ಚಿತ್ರದಲ್ಲಿ ಧೀರಜ್, ರಾಧೆ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಮೊದಲಿಗೆ ನಿರ್ದೇಶಕ ಚಂದ್ರಮೋಹನ್ ಮಾತನಾಡುತ್ತ ಫಾರೆಸ್ಟ್ ಚಿತ್ರದ ನಂತರ ನಾನು, ಧೀರಜ್ ಸೇರಿ ಒಂದು ಕಥೆ ರೆಡಿ ಮಾಡಿಕೊಂಡು ನಿರ್ಮಾಪಕರ ಹುಡುಕಾಟದಲ್ಲಿದ್ದೆವು. ಆದರೆ ಅಂಥದ್ದೇ ಕಥೆಯ ಏಳುಮಲೆ ಚಿತ್ರ ರಿಲೀಸಾಯ್ತು. ನಂತರ ಮತ್ತೊಂದು ಕಥೆ ಮಾಡಿಕೊಂಡೆವು. ಒಂದು ಸಾವು ಹಾಗೂ ತಿಥಿಯ ನಡುವೆ ಇರುವ 11 ದಿನಗಳಲ್ಲಿ ನಡೆಯುವ ಕಥೆಯಿದು. ಇದರ ಮಧ್ಯೆ ಒಂದು ಲವ್ ಕೂಡ ಆಗುತ್ತೆ. ನಾಯಕ, ನಾಯಕಿ ಈ ಎರಡು ಪಾತ್ರಗಳ ಮೇಲೇ ಹೆಚ್ಚಿನಭಾಗದ ಕಥೆ ನಡೆಯಲಿದೆ. ಚಿತ್ರದಲ್ಲಿ 3 ಹಾಡುಗಳಿದ್ದು, ರಾಜೇಶ್ ಆನಂದಲೀಲಾ ಸಂಗೀತ ಸಂಯೋಜನೆ ಮಾಡಿದ್ದಾರೆ.




EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.